ಮಾನಸಿ

ತಿಂಗಳ ಪತ್ರಿಕೆ ನವಂಬರ್ 1995



- ಬೀಜಿಂಗ್ ಸಮಾವೇಶ : ಮಹಿಳೆಯರಿಗೆ ಕೊಟ್ಟಿದ್ದೇನು ?
- ಒಂದು ಅನುಭವ – ಅನಿಸಿಕೆ
- ಪ್ರತಿಭಟಿಸಿದ ಬಿಷಪ್ ಕಾಟನ್ ವಿದ್ಯಾರ್ಥಿನಿಯರು

ಮಾನಸ

ತಿಂಗಳ ಪತ್ರಿಕೆ

ಸಂಪುಟ : 12 ಸಂಚಿಕೆ : 10

ನವಂಬರ್ - 1995

ಸಂಪಾದಕೀಯ ಮಂಡಳಿ :

ರಾಜೇಶ್ವರಿ ಎಚ್. ಎಸ್.,
ಚಂಪಾವತಿ ಎಚ್. ಎಸ್., ಸರಸ್ವತಿ ದು.,
ಸವಿತ ಎ., ಗಾಯತ್ರಿ ವಿ.

ಸಲಹೆ-ಸಹಕಾರ

ಇಳಾ ವಿಜಯಾ

ಸಹ ಸಂಪಾದಕರು :

ವನಜಾ ವೆಂ.
ಡಾ॥ ಪ್ರಭಾವತಿ ಎಸ್. ವಿ.
ನೀಲಾಂಜನ

ವಿಳಾಸ :

"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067

ಸಂಪರ್ಕ ವಿಳಾಸ

ನಂ. 457, 12ನೇ ಅಡ್ಡರಸ್ತೆ,
ಪಶ್ಚಿಮ ಕಾರ್ಡ್‌ರಸ್ತೆ, 2ನೇ ಹಂತ
ಮಹಾಲಕ್ಷ್ಮಿಪುರ, ಬೆಂಗಳೂರು–560 086

ಸೂಚನೆ : ಬಿಡಿ ಪ್ರತಿ : **3-00 ರೂ.**
ವಾರ್ಷಿಕ ಚಂದಾ : **25 ರೂ.**
ಆಜೀವ ಚಂದಾ : **300 ರೂ.**

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ...

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



1995ರ ನಾಲ್ಕನೇ ವಿಶ್ವ ಮಹಿಳಾ ಸಮಾವೇಶದ ಸಮಯದಲ್ಲಿ ದೆಹಲಿಯ ಸ್ವಾಯತ್ತ ಮಹಿಳಾ ಸಂಘಟನೆ 'ಸಹೇಲಿ'ಯು ಹೊರತಂದ ತನ್ನ ವಾರ್ತಾ ಪತ್ರದಲ್ಲಿ ಒಂದು ವ್ಯಂಗ್ಯ ಚಿತ್ರವಿದೆ. 1975ರ ಮೆಕ್ಸಿಕೋದ ಮೊದಲ ವಿಶ್ವ ಸಮಾವೇಶದಿಂದ 1985ರ ನೈರೋಬಿ ಸಮಾವೇಶ ಮತ್ತು 1995ರ ಬೀಜಿಂಗ್ ಸಮಾವೇಶದವರೆಗಿನ ವಿಶ್ವ ಮಹಿಳಾ ಚಳವಳಿಯ ಹಾದಿಯನ್ನು ಅದು ಹೀಗೆ ಗುರ್ತಿಸುತ್ತದೆ: 1975ರ ಸಮಾವೇಶದ ವೇಳೆ ವಿಶ್ವ ಸಂಸ್ಥೆಯ ಲಾಂಛನ ಸಣ್ಣದಿದ್ದು ಕೆಲವೇ ಮಹಿಳೆಯರು ಅದರ ಒಳಗಿದ್ದಾರೆ. ಅದರ ಹೊರಗಡೆಯ ಮಹಿಳಾ ಚಳವಳಿ ಅಪಾರ ಸಂಖ್ಯೆಯ ಮಹಿಳೆಯರಿಂದ ಕೂಡಿ ತುಂಬಾ ಬಲವಾಗಿದೆ. ಜತೆಗೆ ಸ್ತ್ರೀವಾದೀ ಲಾಂಛನ ಸ್ಪಷ್ಟವಾಗಿ ದೊಡ್ಡದಾಗಿದೆ. 1985ರ ನೈರೋಬಿ ಸಮಾವೇಶದ ವೇಳೆಗೆ ವಿಶ್ವಸಂಸ್ಥೆಯ ಲಾಂಛನ ದೊಡ್ಡದಾಗಿ ಬೆಳೆದು ಅನೇಕ ಮಹಿಳೆಯರು ಅದರೊಳಗೆ ಸೇರಿಹೋಗಿದ್ದಾರೆ. ಹೊರಗಡೆಯ ಮಹಿಳಾ ಚಳವಳಿಯ ಬಲ ಕಡಿಮೆಯಾಗಿ ಸ್ತ್ರೀವಾದೀ ಸಂಕೇತ ಪೇಲವವಾಗಿ ದುರ್ಬಲಗೊಂಡಿದೆ. 1995ರ ಬೀಜಿಂಗ್ ಸಮಾವೇಶದ ವೇಳೆಗೆ ವಿಶ್ವಸಂಸ್ಥೆಯ ಲಾಂಛನ ವಿಪರೀತ ದೊಡ್ಡದಾಗಿ ಬೆಳೆದು ಹೊರಗಡೆಯ ಮಹಿಳೆಯರನ್ನೆಲ್ಲ ಸಂಪೂರ್ಣ ತನ್ನೊಡಲೊಳಕ್ಕೆ ಸೆಳಕೊಂಡಿದೆ. ಮಹಿಳಾ ಚಳವಳಿ ಬಹುತೇಕ ನಾಶಗೊಂಡಂತಾಗಿ ಸ್ತ್ರೀವಾದೀ ಲಾಂಛನ ಸಂಪೂರ್ಣ ನಶಿಸಿಹೋಗಿದೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ರಾಜ್ಯ ವ್ಯವಸ್ಥೆ ಮಹಿಳಾ ಚಳವಳಿಯನ್ನು ಬಹುತೇಕ ಸಂಪೂರ್ಣ ತನ್ನ ನಿಯಂತ್ರಣಕ್ಕೆ ಒಳಪಡಿಸಿಕೊಂಡಿರುವ ಪ್ರಕ್ರಿಯೆ ಇದು. ಸ್ತ್ರೀವಾದೀ ಪರಿಭಾಷೆಯನ್ನು, ಸಂಕೇತಗಳನ್ನು ಸೊಗಸಾಗಿ ಒಗ್ಗಿಸಿಕೊಂಡು ಚಳವಳಿಯ ವಕ್ತಾರನೋಪಾದಿಯಲ್ಲಿ ವರ್ತಿಸುವ ಪರಿ ಇದು. ಇದೆಲ್ಲಾ ಹೇಗಾಯಿತು?

ಎಪ್ಪತ್ತರ ದಶಕದ ಕೊನೆಯ ವೇಳೆಗೆ ವರದಕ್ಷಿಣೆ ಮತ್ತು ಅತ್ಯಾಚಾರಗಳ ವಿರುದ್ಧ ವ್ಯಾಪಕವಾಗಿ ಪ್ರತಿಭಟಿಸುತ್ತಿದ್ದ ಮಹಿಳಾ ಚಳವಳಿಗೆ ಬಹುಮಾನ ರೂಪದಲ್ಲಿ ಸರ್ಕಾರ ಈ ಸಂಬಂಧದ ಕಾನೂನಿನಲ್ಲಿ ತಿದ್ದುಪಡಿ ತಂದಿತು. ಆದರೆ ಇದನ್ನು ಕಾರ್ಯಶೀಲ ಗೊಳಿಸುವಲ್ಲಿ ತೋರಿದ ಅದ್ಯಕ್ಷತೆಯಿಂದ ಪರಿಸ್ಥಿತಿಯೇನೂ ಬದಲಾಗಲಿಲ್ಲ. 80ರ ದಶಕದಲ್ಲಿ "ಮಹಿಳೆ ಯುವಜನ ಮತ್ತು ಕ್ರೀಡಾ ಇಲಾಖೆ"ಎನ್ನುವ ಪ್ರತ್ಯೇಕ ಇಲಾಖೆಯನ್ನೇ ಸರ್ಕಾರ ಪ್ರಾರಂಭಿಸಿತು. ಇಲ್ಲಿ ಈವರೆಗಿನ ಮಹಿಳಾ ಕಲ್ಯಾಣ ಯೋಜನೆಗಳನ್ನೇ ಬೇರೊಂದು ಪ್ರತ್ಯೇಕ ಇಲಾಖೆಯ ಮೂಲಕ ಕಾರ್ಯಶೀಲಗೊಳಿಸಲಾಯಿತೆಂದು ಮಾತ್ರ ಹೇಳಬಹುದು. 75 - 85ರ ದಶಕದಲ್ಲಿ ಮಹಿಳಾ ಕಾರ್ಯಕ್ರಮಗಳನ್ನು ರೂಪಿಸಲು ಸಾಕಷ್ಟು ಹಣ ಹರಿಯಿತು. ಇಲ್ಲಿ ಪ್ರಾರಂಭವಾದ ಮಹಿಳಾ ಅಭಿವೃದ್ಧಿ ಕಾರ್ಯಕ್ರಮ, ಮಹಿಳಾ ಸಮಖ್ಯಾಗಳಂತಹ ಅತ್ಯಂತ ಪ್ರಗತಿಪರ ಧೋರಣೆಯ ಕಾರ್ಯಕ್ರಮಗಳ ಸ್ಥಿತಿ ಇವತ್ತಿಗೆ ಏನಾಗಿದೆಯೆಂಬುದು ಸ್ಪಷ್ಟ.

ಇಲ್ಲಿನ ಕೆಲಸಗಾರರು ಕನಿಷ್ಟ ಹಕ್ಕುಗಳಿಗಾಗಿ ದೇಶದಾದ್ಯಂತ ಹೋರಾಡುತ್ತಿದ್ದಾರೆ. 1988ರಲ್ಲಿ ಭಾರತ ಸರ್ಕಾರ ಹೊರತಂದ National perspective plan for women ಮಹಿಳಾ ಚಳವಳಿಯ ಈಡೇರದ ಬೇಡಿಕೆಗಳಾದ ಮಾರಕ ಗರ್ಭ ನಿರೋಧಗಳ ನಿಷೇಧ, ಭ್ರೂಣ ಲಿಂಗ ಪರೀಕ್ಷೆಯ ನಿಷೇಧ, ಸಮಾನ ನಾಗರೀಕ ಸಂಹಿತೆಯನ್ನು ಜಾರಿಗೊಳಿಸುವಿಕೆಗಳೇ ಅಲ್ಲದೆ ಮಹಿಳಾ ಚಳವಳಿಯಲ್ಲಿ ಇನ್ನೂ ತೀವ್ರತೆ ತಲುಪದೇ ಇದ್ದಂತಹ ಮಕ್ಕಳ ಪಾಲನೆ, ಬೆಂಬಲ ಸೇವೆಗಳು, ತರಬೇತಿ ಮತ್ತು ನೌಕರಿ, ಲಿಂಗಭೇದ ಕುರಿತ ಜಾಗೃತಿ ಇತ್ಯಾದಿಗಳನ್ನೆಲ್ಲಾ ಆದ್ಯತಾ ಅಂಶಗಳಾಗಿ ಪರಿಗಣಿಸಿತ್ತು. ಇವೆಲ್ಲ ದಾಖಲೆಯಲ್ಲೇ ಉಳಿದಿರುವುದು ಮಾತ್ರ ಇಂದಿನ ವಾಸ್ತವ. ಇನ್ನು ಮಹಿಳಾ ಚಳವಳಿಗೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡ ನ್ಯಾಷನಲ್ ಕಮಿಷನ್‌ಗಳು. ಆಳುವ ಪಕ್ಷದ ಪ್ರತಿಷ್ಟಿತ ಮಹಿಳೆಯರು - ಪಕ್ಷದಲ್ಲಿ ಬೇರೆ ಏನೂ ಸ್ಥಾನ ದೊರಕದೇ ಹೋದಾಗ ಇಲ್ಲಿನ ಸ್ಥಾನಗಳನ್ನು ಆಕ್ರಮಿಸಿಕೊಂಡರು. ಒಟ್ಟಾರೆಯಲ್ಲಿ ಇಲ್ಲಿ ಮಹಿಳೆಯರಿಗೆ ದಕ್ಕಿದ್ದು ಅಷ್ಟೋ ಇಷ್ಟೋ ಆದರೂ ಚಳವಳಿಯನ್ನು co-opt. ಮಾಡುವುದು ದೊಡ್ಡ ರೀತಿಯಲ್ಲಿ ಸಾಧ್ಯವಾಯಿತು.

ಇದೆಲ್ಲಾ ಒಂದು ಕಡೆಯಾದರೆ ಇನ್ನೊಂದು ಕಡೆ, ಶ್ರೀಮಂತ ದೇಶಗಳ ದತ್ತಿ ಸಂಸ್ಥೆಗಳ ಸಹಾಯದಿಂದ 75-85 ದಶಕದಲ್ಲಿ ಮಹಿಳೆಯರ ಹೆಸರು ಹೇಳಿಕೊಂಡ ಯಾವುದೇ ಕಾರ್ಯಕ್ರಮಗಳಿಗೆ ಹಣ ದಕ್ಕತೊಡಗಿತು. ಈ ದತ್ತಿ ಸಂಸ್ಥೆಗಳ ಮೂಲಕವೇ ಜಾಗತಿಕ ಅಭಿವೃದ್ಧಿಯ ಕಲ್ಪನೆಯೂ ಮೂರನೇ ವಿಶ್ವಕ್ಕೆ ರವಾನೆಯಾಗತೊಡಗಿತು. ಈಪತ್ತಿಗಂತೂ ಮಹಿಳೆಯರ ಹೆಸರೇಳಿಕೊಂಡು ಒಂದು ಬೀದಿ ನಾಟಕ ಮಾಡಿ ಹಣ ಪಡೆಯಬಹುದು. ಇಂತಹ ಮುಕ್ತತೆ ಮತ್ತು ಸಂಪನ್ಮೂಲಗಳ ಲಭ್ಯತೆ ಮಹಿಳಾ ಚಳವಳಿಗೆ ಅತ್ಯಂತ ಆಕರ್ಷಕವಾಗಿ ಕಂಡದ್ದು ಆಶ್ಚರ್ಯವೇನಲ್ಲ. ಇಲ್ಲೂ ಪುನಃ ಮೊದಲ ವಿಶ್ವವೇ ಮೂರನೇ ವಿಶ್ವದ ಮೇಲೆ ಪ್ರಾಬಲ್ಯ ಸಾಧಿಸಿತು. ಇಂತಹ ಫಂಡಿಂಗಿನ ಜಾಲಗಳೇ ಇಂದು ಬಹುತೇಕ ವಿಶ್ವ ಸಮಾವೇಶಗಳನ್ನು ನಿಯಂತ್ರಿಸುತ್ತಿರುವುದು. ಬೀಜಿಂಗ್ ಸಮಾವೇಶದ ಸಮಯದಲ್ಲಿ ಇಂತಹ ಜಾಲಗಳ ಮೂಲ ಆಶಯಗಳು ಸ್ಪಷ್ಟವಾಗಿದ್ದವು.

ಇಂಡಿಯಾದಲ್ಲಿ ಸಮಾವೇಶದ ಸಿದ್ಧತಾ ಪ್ರಕ್ರಿಯೆಯನ್ನು ನೋಡಿಕೊಳ್ಳಲು ಒಂದು ಕೋ - ಆರ್ಡಿನೇಷನ್ ಘಟಕವನ್ನು ಸ್ಥಾಪಿಸಲಾಗಿತ್ತು. Grass root ಮಹಿಳೆಯರನ್ನು ಗುರ್ತಿಸಿ ಬೀಜಿಂಗ್‌ಗೆ ಕಳಿಸಿಕೊಡುವ ಉದ್ದೇಶವನ್ನು ಹೇಳಿಕೊಂಡರೂ ಇದು ಇಡೀ ಐಡಿಯಾವನ್ನೇ ಪ್ರಭಾವಿಸಿದ್ದು ಮಾತ್ರ ಸತ್ಯಸಂಗತಿ. ವಿಶ್ವ ಸಮಾವೇಶಗಳಲ್ಲಿ ಮೂರನೇ ವಿಶ್ವದ ಬಡ - ಶೋಷಿತ ಮಹಿಳೆಯರ ಪ್ರಶ್ನೆಗಳನ್ನೇ ಎತ್ತದ ಪಂಚತಾರಾ ಸಂಸ್ಕೃತಿಯ ಮಹಿಳಾ ಗುಪ್ತಕೂಟಗಳು (caucuses) ಬೆಳೆಯುತ್ತಿವೆ. ದುರಂತವೆಂದರೆ ಮಹಿಳಾ ಚಳವಳಿಯನ್ನು ವಿದೇಶೀ ಹಣದಿಂದ, ಸರ್ಕಾರೀ ಹಣದಿಂದ ನಡೆಸುವ ಪ್ರಕ್ರಿಯೆ ಕಳೆದ 15 ವರ್ಷಗಳಲ್ಲಿ ಎಷ್ಟೊಂದು ನ್ಯಾಯೋಚಿತಗೊಂಡು ಬಿಟ್ಟಿದೆಯೆಂದರೆ, ಇದರ ಹೊರಗುಳಿದಿರುವವರು ಕೇವಲ ಕೆಲವೇ ಗುಂಪುಗಳವರು.

ಇವೆಲ್ಲದರ ನಡುವೆ ಮಹಿಳಾ ಚಳವಳಿಯ ಸ್ಥಗಿತತೆ ಅರ್ಥವಾಗುವಂತದ್ದೇ. ಹೇಗೋ ಚಳವಳಿಯಲ್ಲಿ ಉಳಿಯಬಯಸುವವರು ಚಳವಳಿಯ ಸ್ವರೂಪವನ್ನೂ ಕಾಣಿಸುವ ಜತೆಗೆ ಸಂಬಳವನ್ನೂ ಕೊಡುವ "ಕನಸಿನ ಲೋಕ" ಗಳಾದ NGO ಸೇರುತ್ತಾರೆ, ಇಲ್ಲ ಸರ್ಕಾರೀ ಕಾರ್ಯಕ್ರಮಗಳಲ್ಲಿ ತೂರಿಕೊಳ್ಳುತ್ತಾರೆ. ಕ್ರಮೇಣ ದತ್ತಿ ಸಂಸ್ಥೆಗಳ, ಸರ್ಕಾರದ ಮರ್ಜಿಗೆ ಸಿಕ್ಕಿ ಅಜ್ಞಾಪಾಲಕರಾಗುತ್ತಾರೆ. ಇಂತಹ ಸ್ಥಿತಿಯಲ್ಲಿ ಹೇಗೋ ಅಂತೂ ಎಲ್ಲೆಲ್ಲೂ ಮಹಿಳೆಯರು ಗುರ್ತಿಸಲ್ಪಡುತ್ತಿದ್ದಾರೆ (ರಾಜಕೀಯ ಪಕ್ಷಗಳೂ ಈಗ ಪ್ರತ್ಯೇಕ ಮಹಿಳಾ ಶಾಖೆಗಳನ್ನೇ ಹೊಂದಿವೆ) ಎಂದು ನಿಡುಸುಯ್ದು ಸ್ವಾಯತ್ತ ಮಹಿಳಾ ಚಳವಳಿಯ ತನ್ನ ಕೆಲಸ ಮುಗಿಯಿತೆಂದು ಮನೆಗೆ ಹೋಗುವಂತಿಲ್ಲ. ರಾಜ್ಯ ವ್ಯವಸ್ಥೆಯ ಯಾವತ್ತೂ ಜನವಿರೋಧೀ, ಪಿತೃಪ್ರಧಾನ ಧೋರಣೆಯನ್ನು ಬಯಲಿಗೆಳೆಯುತ್ತಲೇ ನಮ್ಮ ರಾಜಕೀಯ ನಿಲುವನ್ನು ಗಟ್ಟಿಗೊಳಿಸುತ್ತಾ ಸಾಮ್ರಾಜ್ಯಶಾಹೀ ಶಕ್ತಿಗಳಿಗೆ ಮುಖಾಮುಖಿಯಾಗಬೇಕಾದ ಅತ್ಯಂತ ಕ್ಲಿಷ್ಟಕರ ಸನ್ನಿವೇಶ ನಮ್ಮ ಮುಂದಿದೆ.

ಬೀಜಿಂಗ್ ಸಮಾವೇಶ: ಮಹಿಳೆಯರಿಗೆ ಕೊಟ್ಟದ್ದೇನು?

● ಅಮ್ಮು ಜೋಸೆಫ್

ಕಳೆದ ಎರಡು ದಶಕಗಳಿಂದಲೂ ನಡೆಯುತ್ತಾ ಬಂದಿರುವ ವಿಶ್ವಸಂಸ್ಥೆಯ ಸಮಾವೇಶಗಳ ಸರಣಿಯಲ್ಲಿ ಬೀಜಿಂಗ್ ಸಮಾವೇಶ ನಾಲ್ಕನೆಯದು. 1975ರಲ್ಲಿ ಮೆಕ್ಸಿಕೋದಲ್ಲಿ ನಡೆದ ಮೊದಲ ಸಮಾವೇಶವು ಅಂತರರಾಷ್ಟ್ರೀಯ ಮಹಿಳಾ ದಶಕದ (75-85) ಆರಂಭವನ್ನೂ ಸೂಚಿಸುವದಾಗಿತ್ತು. ಎರಡನೇ ಸಮಾವೇಶ ಈ ಮಧ್ಯೆ 1980ರಲ್ಲಿ ಕೋಪನ್‌ಹೇಗನ್‌ನಲ್ಲಿ ನಡೆಯಿತು. ದಶಕದ ಕೊನೆಯನ್ನು ಸಾರುವ ಮೂರನೇ ಸಮಾವೇಶ 1985ರಲ್ಲಿ ನೈರೋಬಿಯಲ್ಲಿ ನಡೆಯಿತು.

ಮೊದಲೆರಡು ಸಮಾವೇಶಗಳಲ್ಲಿ ಉತ್ತರ ದೇಶಗಳ ಮಹಿಳೆಯರದ್ದೇ ಮೇಲುಗೈ ಇದ್ದು ದಕ್ಷಿಣದ ಮಹಿಳೆಯರು ಸರ್ಕಾರದ ಪ್ರತಿನಿಧಿಗಳ ಪತ್ನಿಯರಾಗಿಯಷ್ಟೇ ಹೆಚ್ಚಾಗಿ ಭಾಗವಹಿಸಿದ್ದರು. ನೈರೋಬಿಯ ಸಮಾವೇಶದಲ್ಲಷ್ಟೇ ಇಂಡಿಯಾವೂ ಸೇರಿದಂತೆ ದಕ್ಷಿಣ ದೇಶಗಳ (ಮೂರನೇ ವಿಶ್ವ ಅಥವಾ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಎಂತಲೂ ಕರೆಯಲಾಗುತ್ತೆ) ಮಹಿಳೆಯರು, ವಿಶೇಷವಾಗಿ ಸ್ವತಂತ್ರ ಮಹಿಳಾ ಗುಂಪುಗಳ ಪ್ರತಿನಿಧಿಗಳು ಮತ್ತು ಜಾಲಗಳ ಪ್ರತಿನಿಧಿಗಳು ಭಾಗವಹಿಸಿದ್ದು ವಿಶ್ವವು ತಮ್ಮ ಅನುಭವ ಮತ್ತು ಅನಿಸಿಕೆಗಳನ್ನು ಪರಿಗಣಿಸಬೇಕೆಂದು ಒತ್ತಾಯಿಸಿದರು.

ಮೂರನೇ ಸಮಾವೇಶದಲ್ಲಿ ಹೊರಬಂದ "ಮಹಿಳೆಯರ ಮುನ್ನಡೆಗೆ ಮುನ್ನೋಟದ ತಂತ್ರಗಳು" ಎಂಬ ದಾಖಲೆಯೇ ಬೀಜಿಂಗಿನ ನಾಲ್ಕನೆಯ ಸಮಾವೇಶಕ್ಕೆ ಗ್ರಾಸವಾದದ್ದು. ಶಾಂತಿ, ಸಮಾನತೆ ಮತ್ತು ಅಭಿವೃದ್ಧಿಗಳ ಮಂತ್ರದ ಈ ದಾಖಲೆಯ ತಂತ್ರಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಆಯಾ ದೇಶಗಳು ಮಾಡಿರುವ ಕೆಲಸವನ್ನಾಧರಿಸಿದ ವರದಿ ತಯಾರಿಸಿ ಬೀಜಿಂಗ್‌ನಲ್ಲಿ ಮಂಡಿಸಬೇಕಾತ್ತು.

"ಮಹಿಳೆಯರು ಆಗಸದರ್ಧವನ್ನು ಆವರಿಸುತ್ತಾರೆ", ಹೀಗೆಂದವರು ಚೈನಾ ಗಣರಾಜ್ಯದ ಕ್ರಾಂತಿಕಾರೀ ನಾಯಕ ಮಾವೋತ್ಸೆತುಂಗ್. ಇದು ತುಂಬಾ ಹಿಂದಿನ ಮಾತು. ಆದರೆ 1995ರ ಸಪ್ಟೆಂಬರ್‌ನಲ್ಲಿ ವಿಶ್ವದ ಮೂಲೆ ಮೂಲೆಗಳಿಂದ 50,000 ಜನ ವಿಶ್ವಸಂಸ್ಥೆಯ ನಾಲ್ಕನೇ ವಿಶ್ವ ಮಹಿಳಾ ಸಮಾವೇಶ ಮತ್ತು ಸಮಾನಾಂತರ NGO ಫೋರಂನಲ್ಲಿ ಬಂದು ಸೇರಿದಾಗ ಆತನ ಮಾತು ಜೀವಂತಗೊಂಡಿತು.

ಇವೆರಡೂ ಕಾರ್ಯಕ್ರಮಕ್ಕೆ ಬಂದು ಸೇರಿದ್ದ ಮಹಿಳೆಯರ ಅನೇಕ ಹೇಳಿಕೆಗಳಲ್ಲಿ ಆತನ ಮಾತುಗಳು ಪ್ರತಿಧ್ವನಿಸುತ್ತಿದ್ದವು. ಸಮಾಜಕ್ಕೆ ಮಹಿಳೆಯರ ಬಹುಬಗೆಯ ಕೊಡುಗೆಯನ್ನು ಗುರುತಿಸಬೇಕೆಂದು ಮತ್ತು ಪ್ರಪಂಚದಾದ್ಯಂತ ಮಹಿಳೆಯರಿಗೆ ಎದುರಾಗಿರುವ ಕರಾಳ ಸ್ಥಿತಿಯನ್ನು ಸುಧಾರಿಸಬೇಕೆನ್ನುವಲ್ಲಿನ ಅವರ ಒತ್ತಡ ತೀವ್ರವಾಗಿತ್ತು.

ಹೆಚ್ಚು ಕಮ್ಮಿ ಒಟ್ಟೊಟ್ಟಿಗೇ ನಡೆದ ಈ ಎರಡೂ ಬೃಹತ್ ಕಾರ್ಯಕ್ರಮಗಳ ಬಗ್ಗೆ ಪತ್ರಿಕೆಗಳು ಯಾವುದೇ ಬಗೆಯ ಚಿತ್ರಣ ನೀಡಿರಲಿ, ಇವೆರಡೂ ಸಾಕಷ್ಟುಗಂಭೀರ ವಾದುವುಗಳೇ ಆಗಿದ್ದವು. ನಿರ್ದಿಷ್ಟ ಸ್ವರೂಪದಾಗಿದ್ದವು. ಅವುಗಳಲ್ಲಡಗಿರುವ ಯಾವತ್ತೂ ಭಿನ್ನತೆಯನ್ನು ಪರಿಗಣಿಸುವಾಗ ಇದು ಸಹಜವೆಂದೇ ತೋರುತ್ತದೆ. ನಾಲ್ಕನೇ ವಿಶ್ವ ಮಹಿಳಾ ಸಮಾವೇಶವು ವಿಶ್ವಸಂಸ್ಥೆಯ 190 ದೇಶಗಳ ಅಂತರ ಸರ್ಕಾರೀ ಅಧಿಕೃತ ಸಭೆಯಾದರೆ NGO ಫೋರಂ ವಿವಿಧ ಮಹಿಳಾ ಗುಂಪುಗಳ - ಜಾಲಗಳ ಮತ್ತು ಅಸಂಖ್ಯಾತ ಸರ್ಕಾರೇತರ ಸಂಸ್ಥೆಗಳ 26,000 ಮಹಿಳೆಯರ (ಕೆಲ ಪುರುಷರ) ಸ್ವಯಂ ಪ್ರೇರಿತ ಸಭೆಯಾಗಿತ್ತು.

NGO ಫೋರಂ ತನ್ನ ಗಮನ ಸೆಳೆಯುವ "ಮಹಿಳೆಯರ ಕಂಗಳಿಂದ ಪ್ರಪಂಚವನ್ನು ಕಾಣು"ವ ಘೋಷಣೆಯೊಂದಿಗೆ ಆಗಸ್ಟ್ 30ರಂದು ಆರಂಭವಾಗಿ ಸೆಪ್ಟಂಬರ್ ಎಂಟರಂದು ಕೊನೆಗೊಂಡಿತು. ಇದು ನಡೆದದ್ದು ಚೀನಾದ ರಾಜಧಾನಿ ಬೀಜಿಂಗ್‌ನಿಂದ ಒಂದು ಗಂಟೆ ಪ್ರಯಾಣದ ದೂರದ ಸಣ್ಣ ಊರು ಹಯಿರೋದಲ್ಲಿ. ಮಹಿಳೆಯರ ಮುನ್ನಡೆಯಿಂದ ಸಮಾನತೆ, ಅಭಿವೃದ್ಧಿ ಮತ್ತು ಶಾಂತಿಯ ಮಂತ್ರವನ್ನು ಗುರಿಯಾಗಿ ಹೊತ್ತ ವಿಶ್ವ ಮಹಿಳಾ ಸಮಾವೇಶವು ಸಪ್ಟೆಂಬರ್ 5ರಿಂದ 15ರವರೆಗೆ ಬೀಜಿಂಗ್ ಅಂತರ ರಾಷ್ಟ್ರೀಯ ಸಮಾವೇಶ ಕೇಂದ್ರ (BICC)ದಲ್ಲಿ ನಡೆಯಿತು.

NGO ಫೋರಂನ ಸ್ಥಳವನ್ನು ಕೊನೆಗಳಿಗೆಯಲ್ಲಿ ವಾದಗ್ರಸ್ತ ರೀತಿಯಲ್ಲಿ ದೂರದ ಜಾಗಕ್ಕೆ ಬದಲಾಯಿಸಿದ್ದು ಮತ್ತು ಎರಡೂ ಕಾರ್ಯಕ್ರಮಗಳು ಕೇವಲ 5 ದಿನಗಳು ಮಾತ್ರ ಒಟ್ಟಿಗೆ ನಡೆದದ್ದು ಸರ್ಕಾರೀ ಮತ್ತು ಸರ್ಕಾರೇತರ ಪ್ರತಿನಿಧಿಗಳ ನಡುವೆ ಪರಸ್ಪರ ಕ್ರಿಯೆಯನ್ನು ಮಿತಿಗೊಳಿಸಿ ಸಂವಹನದ ಅವಕಾಶವನ್ನು ಕಡಿಮೆ ಮಾಡಿತು. ಅದೇನೇಯಾದರೂ, ಮಹಿಳಾ ಗುಂಪುಗಳ ಮತ್ತು ಸರ್ಕಾರೇತರ ಸಂಸ್ಥೆಗಳ ಸುಮಾರು 3,000 ಮಹಿಳೆಯರಿಗೆ ವಿಶ್ವ ಸಮಾವೇಶದಲ್ಲಿ ಪಾಲುಗೊಳ್ಳುವ ಅವಕಾಶ ಸಿಕ್ಕಿತಾಗಿ ಅವರು ಸರ್ಕಾರೀ ಪ್ರತಿನಿಧಿಗಳೊಂದಿಗಿನ ತಮ್ಮ ಒಡನಾಟದಿಂದ ಅವರನ್ನೂ ಮಹಿಳೆಯರ ಕಂಗಳಿಂದ ಪ್ರಪಂಚವನ್ನು ಕಾಣುವಂತೆ ಕೇಳಿಕೊಳ್ಳಲು ಸಾಧ್ಯವಾಯಿತು.

ಮಹಿಳೆಯರದ್ದೇ ಈ ಜಾಗ

ಮೊದಲೇ ಊಹಿಸಬಹುದಾದಂತೆ, NGO ಫೋರಂ ಒಂದು ವಿಕೇಂದ್ರೀಕೃತವಾದ, ಕಟ್ಟುಪಾಡುಗಳಿಲ್ಲದ ಮುಕ್ತ ಕಾರ್ಯಕ್ರಮವಾಗಿತ್ತು. ಕಾರ್ಯಕ್ರಮ ನಡೆಯುವ ಸ್ಥಳದ ನಕ್ಷೆ ಕೊಂಚ ಗೊಂದಲ ಸೃಷ್ಟಿಸಿತ್ತು (ಚಟುವಟಿಕೆಗಳು ಕೆಲ 20 ಕಟ್ಟಡಗಳಲ್ಲಿ, ಡಜನ್ನುಗಟ್ಟಲೆ ಟೆಂಟುಗಳಲ್ಲಿ ನಡೆಯಬೇಕಿದ್ದು ಇವೆಲ್ಲ ಸರಿಸುಮಾರು ಮೂರು ಲಕ್ಷ ಚದುರ ಮೀಟರುಗಳಷ್ಟು ವಿಸ್ತಾರದಲ್ಲಿ ಹರಡಿಕೊಂಡಿದ್ದವು). ಈ ಸಣ್ಣ ಅನಾನುಕೂಲಕ್ಕೆ ಸೊಪ್ಪು ಹಾಕುವಂತಿದ್ದುದು ಮಾತ್ರ ಅಕಾಲದಲ್ಲಿ ಸುರಿದ ಮಳೆ. ಅದೇನೇಯಾದರೂ ಕೆಲವು ಪತ್ರಿಕೆಗಳು ಇದನ್ನು ಅವ್ಯವಸ್ಥೆಯ ಪರಾಕಾಷ್ಟೆಯಂತೆ ಚಿತ್ರಿಸಿದ್ದು ಮಾತ್ರ ಹಾಸ್ಯಾಸ್ಪದ.

ಅದೃಷ್ಟವಶಾತ್ ಆಗಸ್ಟ್ 30ರಂದು ಬೀಜಿಂಗಿನ ಒಲಿಂಪಿಕ್ಸ್ ಸ್ಟೇಡಿಯಂನಲ್ಲಿ ನಡೆದ ಉದ್ಘಾಟನಾ ಸಮಾರಂಭ ಸಮಯಕ್ಕೆ ಮಾತ್ರ ಹವಾಮಾನ ತುಂಬಾ ಸ್ವಚ್ಛವಾಗಿತ್ತು. ಚೀನೀಯರ ಅಸಾಧಾರಣ ಪ್ರತಿಭೆಯನ್ನು ಹಿಡಿದಿಟ್ಟ ಅದೊಂದು ಅಭೂತಪೂರ್ವ ಸಾಂಸ್ಕೃತಿಕ ಕಾರ್ಯಕ್ರಮ.

ಆಗಸ್ಟ್ 31ರಿಂದ ಫೋರಂನ ಕಾರ್ಯಕ್ರಮಗಳು ಆರಂಭವಾದಾಗಿನಿಂದ ಪ್ರತಿದಿನವೂ ಭಾಗವಹಿಸಿದ್ದವರಿಗೆ ಚಟುವಟಿಕೆಗಳ ಸುರಿಮಳೆಯೇ. ಪ್ರಪಂಚದ ಬೇರೆ ಬೇರೆ ಭಾಗಗಳ ಗುಂಪುಗಳು ಮತ್ತು ವ್ಯಕ್ತಿಗಳು ಸಂಯೋಜಿಸಿದ್ದ 350-450 ಚಟುವಟಿಕೆಗಳಿರುತ್ತಿದವು ದಿನಂಪ್ರತಿಯೂ. ಮಾಧ್ಯಮವು ಕೆಲವು ಜನಪ್ರಿಯ ಮತ್ತು ವಾದಗ್ರಸ್ತ ಅಂಶಗಳಿಗಷ್ಟೇ ಪ್ರಚಾರ ಕೊಡುತ್ತಿದ್ದರೂ, ಫೋರಂನ ಚಟುವಟಿಕೆಗಳು ಮಹಿಳೆಯರ ಇಂದಿನ ಅಸಂಖ್ಯಾತ ಕಾಳಜಿಗಳನ್ನಷ್ಟೇ ಅಲ್ಲದೆ 'ಮಹಿಳೆ' ಎನ್ನುವ ವೈವಿದ್ಯತೆಯುಳ್ಳ ಗುಂಪು ಒಳಗೊಳ್ಳಬಹುದಾದ ವಿಭಿನ್ನ ಅಂಶಗಳನ್ನು ಚರ್ಚೆಯ ಕೇಂದ್ರಕ್ಕೆ ತಂದಿತ್ತು.

ಚಟುವಟಿಕೆಗಳು 13 ವಿಷಯಗಳ ಸುತ್ತ ರೂಪುಗೊಂಡಿದ್ದವು: ಅರ್ಥ ವ್ಯವಸ್ಥೆ, ಆಳ್ವಿಕೆ ಮತ್ತು ರಾಜಕೀಯ, ಮಾನವ/ಕಾನೂನು ಹಕ್ಕುಗಳು, ಶಾಂತಿ ಮತ್ತು ಮಾನವ ಭದ್ರತೆ, ಶಿಕ್ಷಣ, ಆರೋಗ್ಯ, ಪರಿಸರ, ಧರ್ಮ ಮತ್ತು ಅಲೌಕಿಕತೆ, ವಿಜ್ಞಾನ ಮತ್ತು ತಂತ್ರಜ್ಞಾನ, ಮಾಧ್ಯಮ, ಕಲೆ ಮತ್ತು ಸಂಸ್ಕೃತಿ, ವರ್ಣ ಮತ್ತು ಜನಾಂಗೀಯ ಪ್ರಶ್ನೆ ಮತ್ತು ಯುವ ಜನಾಂಗ. ಇವು ಗಂಭೀರ ಚರ್ಚೆಗಳ ರೂಪದಲ್ಲಿ, ಪ್ರಾಯೋಗಿಕ ಕಾರ್ಯಾಗಾರಗಳ ರೂಪದಲ್ಲಿ, ಭಾವನಾತ್ಮಕ ಸಾರ್ವಜನಿಕ ವಿಚಾರಣೆಯ ರೂಪದಲ್ಲಿ, ಕುಷಿಯ ಸಾಂಸ್ಕೃತಿಕ ಕಾರ್ಯಕ್ರಮಗಳ ರೂಪದಲ್ಲಿ, ಒತ್ತಾಯಪೂರ್ವಕ ಪ್ರತಿಭಟನೆಗಳ ರೂಪದಲ್ಲಿ, ಸದ್ದಿಲ್ಲದ ಅನುಭವ ಹಂಚಿಕೆಯ ರೂಪದಲ್ಲಿ ಹೀಗೆ ಹತ್ತು ಹಲವು ಬಗೆಯಲ್ಲಿ ಅಭಿವ್ಯಕ್ತಗೊಂಡವು.

ಚಟುವಟಿಕೆಗಳಿಂದ ತುಂಬಿ ತುಳುಕುತ್ತಿದ್ದ ಫೋರಂನ ಆಗುಹೋಗುಗಳನ್ನು ಹಿಡಿದಿಡುವುದು ಖಂಡಿತವಾಗಿಯೂ ಅಸಾಧ್ಯವೇ. ವಿಭಿನ್ನ ಬಗೆಯ ಕಾರ್ಯಾಗಾರಗಳು

ಏಕಕಾಲಕ್ಕೆ ನಡೆಯುತ್ತಿದ್ದ ಫೋರಂನಲ್ಲಿ ಯಾವುದನ್ನು ಆಯ್ದುಕೊಳ್ಳಬೇಕೆಂಬುದೇ ಸಂದಿಗ್ಧವಾಗಿರುತ್ತಿತ್ತು. ಕೊಂಚ ಲಕ್ಕಿ-ಡಿಪ್‌ನ ಹಾಗೆ ಕೂಡ. ಕೆಲವೊಮ್ಮೆ ಹೇಗಾದರಿರಲಿ ಎಂದು ಮಾಡಿಕೊಂಡ ಆಯ್ಕೆಯೂ ಅತ್ಯುತ್ತಮವೇ ಆಗಿರುತ್ತಿತ್ತು. ಉದಾಹರಣೆಗೆ "OJ ಸಿಮ್ಸನ್ : ಕಪ್ಪು ಮಹಿಳೆಯರು ಕಪ್ಪು ಪುರುಷರ ಕುರಿತು ಮಾತನಾಡುತ್ತಾರೆ, ಕ್ರೌರ್ಯ ಮತ್ತು ಅಂತರ್-ವರ್ಣೀಯ ಸಂಬಂಧಗಳು" ಎಂಬ ಕಾರ್ಯಾಗಾರಕ್ಕೆ ಹೋದ ಸ್ನೇಹಿತೆಯೊಬ್ಬರು, ವರ್ಣ, ಲಿಂಗ ಮತ್ತು ವರ್ಗ ಸಮಾಜದಲ್ಲಿನ ಮಹಿಳೆಯರ ಸಂದಿಗ್ಧಗಳ ಬಗ್ಗೆ ಅಪೂರ್ವ ಒಳನೋಟಗಳನ್ನು ಪಡೆದಿದ್ದರು.

ಇನ್ನೊಂದು ಕುತೂಹಲಮಯ ಕಾರ್ಯಾಗಾರದ ಶೀರ್ಷಿಕೆ "ಮಹಿಳೆಯ ಹಕ್ಕುಗಳಿಗೆ ಪುರುಷರ ಬೆಂಬಲ : ಮಹಿಳೆಯರ ಮೇಲಿನ ಕ್ರೌರ್ಯದ ವಿರುದ್ಧ ಕ್ರಿಯೆಗಳು" ಎಂದಿತ್ತು. ಲಿಂಗವಾದವನ್ನು ತೊಡೆದುಹಾಕಲು ಮಹಿಳೆ ಮತ್ತು ಪುರುಷರ ನಡುವಿನ ಸಹಕಾರದಲ್ಲಿ ಕೇಂದ್ರೀಕರಿಸಿದ್ದ ಕಾರ್ಯಾಗಾರ ಇದೊಂದೇ. ಫೋರಂನಲ್ಲಿ 1,500ಕ್ಕೂಗಳ ಹೆಚ್ಚು ಪುರುಷರು ಭಾಗವಹಿಸಿದ್ದು, ಮಕ್ಕಳನ್ನು ನೋಡಿಕೊಳ್ಳುತ್ತಲೋ, ಕಾರ್ಯಾಗಾರವನ್ನು ನಡೆಸುತ್ತಲೋ ಇದ್ದದ್ದು ಹೃದಯ ತುಂಬಿಬರುವಂತಿತ್ತು. ಯಾರೋ ಕೆಲವರು ಪ್ರೇಕ್ಷಣೀಯ ಸ್ಥಳಗಳಿಗೆ ಹೋದರೂ ಬಹುಪಾಲು ಪುರುಷರಂತೂ ಕಲಿಕೆಯಲ್ಲಿ ಒಳಗೊಳ್ಳುತ್ತಾ ತಮ್ಮ ಮಹಿಳೆಯರಿಗೆ ಬೆಂಬಲವನ್ನು ತೋರುತ್ತಿದ್ದರು.

ಬೀಜಿಂಗಿನಲ್ಲಿನ ಆಗುಹೋಗುಗಳನ್ನು ಸರ್ಕಸ್ಸು, "ತಮಾಷಾ", ಪಿಕ್‌ನಿಕ್ಕು, ಜಂಬೂರಿ ಮುಂತಾಗಿ ವರ್ಣಿಸುತ್ತಾ ಅಪಹಾಸ್ಯ ಮಾಡಿದ ಮಾಧ್ಯಮದ ಕೆಲ ಪುರುಷರು, ಮಹಿಳೆಯರದ್ದೇ ಪ್ರಾಬಲ್ಯವಿದ್ದ ಸಮಾವೇಶದಲ್ಲಿ ಒಂದಿಷ್ಟೂ ವಿಚಲಿತಗೊಳ್ಳದೆ ಸಂಪೂರ್ಣ ಬೆಂಬಲಿಗರಾಗಿ ಭಾಗವಹಿಸಿದ್ದ ಈ ಪುರುಷರಿಂದ ಕಲಿಯಬೇಕಾದ್ದು ಬಹಳವೇ. ಸಮಾವೇಶದಲ್ಲಿ ಭಾಗವಹಿಸಿದ್ದವರನ್ನು ಅನೈತಿಕ, ಪುರುಷದ್ವೇಷಿ, ಕಪಟಿ ಮತ್ತು ಕ್ರೂರಿ ಹೆಂಗಸರೆಂದು ಕರೆಯುತ್ತಾ ಇವರು ಮದುವೆ, ಕುಟುಂಬ ತಾಯ್ತನಗಳನ್ನು ತಿರಸ್ಕರಿಸುತ್ತಾ ಬಹುಸಂಬಂಧಗಳಲ್ಲಿ, ಸಲಿಂಗರತಿಯಲ್ಲಿ ಒಳಗೊಳ್ಳುವವರೆಂದೂ ಮತ್ತು ಕೃತಕ ಗರ್ಭಧಾರಣೆಯಿಂದ ಮಕ್ಕಳನ್ನು ಪಡೆಯುವವರೆಂದು ಏನೇನೆಲ್ಲಾ ವಿಕೃತ ಚಿತ್ರಣ ಕೊಡುವಲ್ಲಿ ಮಾಧ್ಯಮದ ಗಂಡಸರು ತುಂಬಾ ಕೆಲಸ ಮಾಡಿದರು.

ಕೆಲ ಮಾಧ್ಯಮಗಳು ಬೀಜಿಂಗ್‌ನಲ್ಲಿ ನಡೆದದ್ದೆಲ್ಲಾ ಲೈಂಗಿಕ ಸ್ವತಂತ್ರಕ್ಕೆ ಸಂಬಂಧಿಸಿದ್ದೇ ಎಂಬ ಕಲ್ಪನೆಯನ್ನು ಪ್ರಚಾರ ಮಾಡಿದರೂ ("ಲೈಂಗಿಕ ಹಕ್ಕುಗಳು" ಎಂದು ಸ್ಪಷ್ಟವಾಗಿ ವ್ಯಾಖ್ಯಿಸಲ್ಪಟ್ಟ ಅಂಶವು ವಿಶ್ವ ಸಮಾವೇಶದಲ್ಲಿ ವಿಸ್ತಾರ ಚರ್ಚೆಗೊಳಪಟ್ಟು ಇದು ಲೈಂಗಿಕ ಸ್ವೇಚ್ಛಾಚಾರಕ್ಕೆ ಸಂಬಂಧಿಸಿದ್ದಲ್ಲ ಎಂಬುದು ಸ್ಪಷ್ಟವಾಗಿದ್ದಿತು) ಆರ್ಥಿಕ ಅಂಶಗಳ ಮೇಲೆ ಫೋರಂನಲ್ಲಿ ಸಾಕಷ್ಟು ಒತ್ತಿದ್ದಿತು. ಹೆಯಿರೋದಲ್ಲಿ 9 ದಿನಗಳ ಕಾಲ ನಡೆದ 3,000ಕ್ಕೂ ಹೆಚ್ಚು ಕಾರ್ಯಾಗಾರಗಳು ಮತ್ತು ಪ್ಯಾನಲ್‌ಗಳಲ್ಲಿ, ಸುಮಾರು 500 ಕಾರ್ಯಾಗಾರಗಳು ವಿವಿಧ ಬಗೆಯ ಆರ್ಥಿಕ ಅಂಶಗಳಲ್ಲಿ ಕೇಂದ್ರೀಕರಿಸಿದ್ದವು. ಬಲಗೊಳ್ಳುತ್ತಿರುವ ಜಾಗತೀಕರಣದ ಪ್ರಕ್ರಿಯೆ ಇಲ್ಲಿನ ವಿಶೇಷ ಕಳಕಳಿಯಾಗಿತ್ತು.

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಕರಾಳ ಛಾಯೆ ಎಲ್ಲೆಲ್ಲೂ ಮಹಿಳೆಯರನ್ನು ಆವರಿಸಿರುವ ಸ್ಥಿತಿಯಲ್ಲಿ ಇದೇನೂ ಆಶ್ಚರ್ಯಕರವಲ್ಲ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮಹಿಳೆಯರು ತಮ್ಮ ಮತ್ತು ತಮ್ಮ ಸಂಸಾರಗಳ ಮೇಲೆ ರಾಚನಿಕ ಹೊಂದಾಣಿಕೆಯ ನೀತಿಗಳಿಂದಾಗುತ್ತಿರುವ ವಿಧ್ವಾಂಸಕಾರೀ ಪರಿಣಾಮಗಳ ಕುರಿತು ಮಾತನಾಡಿದರೆ ಪೂರ್ವ ಯೂರೋಪಿನ ಮಹಿಳೆಯರು ಪ್ರಜಾತಾಂತ್ರಿಕತೆಯ ರೂಪದಲ್ಲಿ ತಾವು ಪಡೆದುಕೊಂಡ ಬಿಡುಗಡೆ ನೌಕರಿ ಮತ್ತು ಸಾಮಾಜಿಕ ಸೇವೆಗಳು ಕಣ್ಮರೆಯಾಗುವುದರೊಂದಿಗೆ ಹೇಗೆ ನಾಶವಾಗಿದೆ ಎಂಬುದನ್ನು ಹಂಚಿಕೊಂಡರು.

ಅದೇ ಸಮಯದಲ್ಲಿ ಪಶ್ಚಿಮದ ಕೈಗಾರೀಕೃತ ಸಮಾಜಗಳ ಮಹಿಳೆಯರು ಆರೋಗ್ಯ ನೀತಿ ಮತ್ತು ಶಿಕ್ಷಣಗಳ ಸಾರ್ವಜನಿಕ ಸೇವಾ ಕ್ಷೇತ್ರಗಳಿಗೆ ಸಿಗುತ್ತಿದ್ದ ಸಹಾಯಗಳಲ್ಲಿ ಕಡಿತ ಉಂಟಾಗಿ ತಲೆದೋರಿರುವ ಪ್ರಕ್ಷುಬ್ಧ ಸ್ಥಿತಿಯನ್ನು ವಿವರಿಸಿದರು. ಇಡೀ ಫೋರಂನಲ್ಲಿ ಎಲ್ಲ ಕಡೆಯೂ ಒಂದೇ ಒಂದು ಅಂಶದ ವಿರುದ್ಧದ ಕೂಗು ಕೇಳಬರುತ್ತಿದ್ದರೆ ಅದು ರಾಚನಿಕ ಹೊಂದಾಣಿಕೆಗೆ ಸಂಬಂಧಪಟ್ಟಿದ್ದು ಮಾತ್ರ.

ಬಿಡಿ ಬಿಡಿ ಗುಂಪುಗಳು ಸಂಯೋಜಿಸುತ್ತಿದ್ದ ಪ್ರತ್ಯೇಕ ಚಟುವಟಿಕೆಗಳ ಜತೆಗೆ ಎಲ್ಲ ಚರ್ಚೆಗಳನ್ನು ಒಟ್ಟಿಗೆ ತರು

ವಂತಹ ಪ್ಯಾನಲ್‌ಗಳಿರುತ್ತಿದ್ದವು. ಇಂದಿನ ಜಾಗತಿಕ ಸನ್ನಿವೇಶದಲ್ಲಿ ಮಹಿಳೆಯರನ್ನು ಕಾಡುತ್ತಿರುವ ಸಮಸ್ಯೆಗಳನ್ನೆಲ್ಲಾ ಒಟ್ಟಿಗೆ ತಂದು ಮುಂದಿನ ಕ್ರಿಯೆಗೆ ತಂತ್ರ ರೂಪಿಸುವುದು ಇದರ ಉದ್ದೇಶವಾಗಿತ್ತು.

ಪ್ರತಿ ಮಧ್ಯಾಹ್ನ ನಡೆಯುತ್ತಿದ್ದ ಪ್ಯಾನಲ್‌ಗಳು, ಎಲ್ಲೆಡೆ ಮಾನವ ಬದುಕನ್ನು ಅದೂ ಮುಖ್ಯವಾಗಿ ಮಹಿಳೆಯರ ಬದುಕನ್ನು ಅಸಹನೀಯಗೊಳಿಸುತ್ತಿರುವ ಜಾಗತಿಕ ಶಕ್ತಿಗಳ ಕುರಿತು ಟೀಕಾತ್ಮಕ ವಿಶ್ಲೇಷಣೆ ನಡೆಸುತ್ತಿದ್ದುವು. ಇಂತಹ ಶಕ್ತಿಗಳನ್ನು ಹೀಗೆ ಗುರುತಿಸಲಾಯಿತು : ಆಳ್ವಿಕೆಯ ಧೋರಣೆ (ಪೌರತ್ವ ಮತ್ತು ರಾಜಕೀಯದಲ್ಲಿ ಭಾಗವಹಿಕೆಯನ್ನೂ ಒಳಗೊಂಡಂತೆ), ಶಾಂತಿ ಮತ್ತು ಮಾನವ ಭದ್ರತೆಗಳಿಗಿರುವ ಅಡೆತಡೆಗಳು (ಮಿಲಿಟರೀಕರಣ, ಕೌರ್ಯ ಮತ್ತು ಬಡತನಗಳ ಪರಿಣಾಮಗಳನ್ನೂ ಒಳಗೊಂಡಂತೆ), ಆರ್ಥಿಕತೆಯ ಜಾಗತೀಕರಣದಿಂದ ಏಳುವ ಪ್ರಶ್ನೆಗಳು (ಕೆಲಸದ ಮೇಲಿನ ತಾಂತ್ರಿಕತೆಯ ಕ್ರಾಂತಿಯ ಪರಿಣಾಮವನ್ನು ಒಳಗೊಂಡಂತೆ) ವಿವಿಧ ಆಯಾಮಗಳೊಂದಿಗೆ ತಲೆ ಎತ್ತುತ್ತಿರುವ ಸಂಪ್ರದಾಯವಾದ (ಧಾರ್ಮಿಕ, ರಾಷ್ಟ್ರೀಯತಾ, ವರ್ಣಜನಾಂಗೀಯ ಮತ್ತು homophobic) ಮತ್ತು ಮಾಧ್ಯಮ, ಸಂಸ್ಕೃತಿ ಮತ್ತು ಸಂವಹನ (ಎದುರಾಗುವ ಪಶ್ನೆಗಳು ಮತ್ತು ಅವಕಾಶಗಳು).

ಪ್ರಾರಂಭದ ಪ್ಯಾನಲ್‌ನಲ್ಲಿ ತನ್ನ ದೇಶದಲ್ಲಿ ಪ್ರಜಾತಾಂತ್ರಿಕತೆಗಾಗಿ ಹೋರಾಡುತ್ತಾ ಮೊನ್ನಿನವರೆಗೂ ಗೃಹ ಬಂಧನವಲ್ಲಿದ್ದ ಬರ್ಮಾದ ನೋಬಲ್ ಪ್ರಶಸ್ತಿ ವಿಜೇತ ಆ್ಯಂಗ್ ಸಾನ್ ಸೂಕಿಯ ವಿಡಿಯೋಕರಿಸಿಕೊಂಡ ಸ್ಫೂರ್ತಿದಾಯಕ ಸಂದೇಶವನ್ನು ತೋರಿಸಲಾಯಿತು. ದೇಸೀಯ ಮಹಿಳಾ ಜಾಲವನ್ನು ಪ್ರತಿನಿಧಿಸುವ ದೇಸೀ ಅಮೆರಿಕನ್ ಮಹಿಳೆ ವಿನೋನ ಲಡೂಕೆಯವರ ಪರಿಣಾಮಕಾರಿ ಭಾಷಣ ಮತ್ತು ವಿಶ್ವದ ವಿವಿಧೆಡೆಯಲ್ಲಿ ಮಹಿಳೆಯರ ಸ್ಥಿತಿಗತಿ ಕುರಿತ ಪ್ರಾದೇಶಿಕ ದೃಷ್ಟಿಕೋನಗಳು ಕೂಡ ಇಲ್ಲಿನ ಗಮನಾರ್ಹ ಸಂಗತಿಗಳಾಗಿದ್ದವು.

ಫೋರಂನ ಇನ್ನೊಂದು ಆಸಕ್ತಿಯುತ ಚಟುವಟಿಕೆ ಯುವ ಪೀಳಿಗೆಯವರ ಟೆಂಟಿನಲ್ಲಿ ನಡೆಯುತ್ತಿತ್ತು. ಪ್ರಪಂಚದ ವಿವಿದೆಡೆಗಳ ಯುವತಿಯರೆಲ್ಲ ಒಟ್ಟಾಗಿ "ಹಂಚಿಕೆಯ ಮೂಲಕ ಕಲಿತುಕೊಳ್ಳುತ್ತಾ, ಸ್ಫೂರ್ತಿಗೊಳ್ಳುತ್ತಾ, ಯುವ ಮಹಿಳೆಯರಾಗಿ ತಮ್ಮ ಅನನ್ಯತೆಯನ್ನು ಕಂಡುಕೊಳ್ಳುತ್ತಾ, ಭವಿಷ್ಯತ್ತಿಗಾಗಿ ಜಾಲ ನಿರ್ಮಿಸು"ವಲ್ಲಿ ತೊಡಗಿಸಿಕೊಂಡಿದ್ದರು. ಆರೋಗ್ಯ, ರಾಜಕೀಯದಲ್ಲಿ ಪಾಲುದಾರಿಕೆ, ಮಾನವ ಹಕ್ಕುಗಳು, ಮಾಧ್ಯಮ ಮತ್ತು ಕ್ರಿಯಾ ಯೋಜನೆಗಳಂತಹ ಚರ್ಚೆಗಳಲ್ಲಿ ಅವರ ಸಕ್ರಿಯ ಭಾಗವಹಿಕೆ ಇತ್ತು. ಇದರ ಜತೆಗೆಯೇ ಯುವ ಪೀಳಿಗೆಯವರೇ ನಡೆಸಿಕೊಂಡು ಹೋಗುತ್ತಿದ್ದ ಕಾರ್ಯಾಗಾರಗಳಿದ್ದವು.

ಫೋರಂನ ಕಟ್ಟಕಡೆಯ ಪ್ಯಾನಲ್‌ಅನ್ನು ಒಂದು "ಅಂತರ್ ಪೀಳಿಗೆಯ ಸಂವಾದ"ಕ್ಕೆ ಮೀಸಲಿಡಲಾಗಿತ್ತು. ಅಮೆರಿಕದ ಹೆಸರಾಂತ ಸ್ತ್ರೀವಾದೀ ಮತ್ತು M S Magzineನ ಪ್ರಾರಂಭದ ಸಂಪಾದಕಿಯೂ ಆದ ಗ್ಲೋರಿಯಾ ಸ್ಟೈನೆಮ್ ಅವರು ಮಾತನಾಡಬೇಕಾಗಿದ್ದು, ಕೇವಲ ಸಂದೇಶವನ್ನಷ್ಟೇ ಕಳಿಸಿದರು. ತಾನು ಏಕೆ ಅಲ್ಲಿ ಬರಲಿಲ್ಲವೆಂಬುದನ್ನು ತನ್ನ ಸಂದೇಶದಲ್ಲಿ ವಿವರಿಸುತ್ತಾ ತನ್ನಂತಾ "ಹಳೇ ಚಿನ್ನ"ಗಳು ಹೊಸ ಪೀಳಿಗೆಯವರಿಗೆ ಹಾದಿ ತೆರವು ಮಾಡಿಕೊಡಬೇಕೆಂದು ಅಭಿಪ್ರಾಯಪಟ್ಟರು. ಇತರ ಮಹಿಳೆಯರಿಗೆ ಅವರೇನು ಮಾಡಬೇಕೆಂದು ಹೇಳಿಕೊಡುವುದು ಸ್ತ್ರೀವಾದವಲ್ಲ, ಆದರೆ ಅವರೇನು ಮಾಡಬಯಸುತ್ತಾರೋ ಅದಕ್ಕೆ ಶಕ್ತಿಯನ್ನು ಪಡಕೊಳ್ಳಲು ಸಹಾಯಮಾಡುವುದು ಸ್ತ್ರೀವಾದ ಎಂದು ಆಕೆ ಹೇಳಿದರು. ಇದನ್ನು ಉದಾಹಣೆಯ ಮೂಲಕ ತೋರಿಸಿಕೊಡುವುದೇ ಸರಿಯಾದ ರೀತಿ ಎಂದು ಸೇರಿಸಿದ ಆಕೆ ಪ್ರತಿಯೊಬ್ಬ ತಾಯಂದಿರಿಗೂ ಗೊತ್ತಿರುವ ಈ ಸತ್ಯವನ್ನು ಗಾಂಧಿಯಂತ ಒಬ್ಬಿಬ್ಬರನ್ನು ಬಿಟ್ಟರೆ ಪುರುಷ ನಾಯಕರಾರೂ ಕಂಡುಕೊಳ್ಳಲಾರರು ಎಂದರು. ನಿಷಾ ಪೂಬರ್ಟ್ ಎನ್ನುವ ಆಸ್ಟ್ರೇಲಿಯನ್ ಯುವತಿ, "ನೀವು ರೂಪಿಸಿರುವ ಚಳವಳಿಯ ಭಾಗವಾಗಿರಲು ನನಗೆ ಹೆಮ್ಮೆಯೆನಿಸುತ್ತದೆ" ಯೆಂದರು. ಸ್ಪೇನಿನ ಅನಬಲ್ ಸಾಂಟೋಸ್ ಎಂಬ ಯುವತಿಗೆ ತಮ್ಮನ್ನು "ಭವಿಷ್ಯತ್ತಿನ ಏಜೆಂಟುಗಳು" ಎಂದು ಹೇಳುವ ಬಗ್ಗೆ ಒಪ್ಪಿಗೆಯಿಲ್ಲ. "ನಾವಿಲ್ಲಿ, ವರ್ತಮಾನದಲ್ಲೇ ಇದ್ದೇವೆ. ಆದ್ದರಿಂದಲೇ ನಾವು ಸಂವಾದಿಸಬೇಕಾಗಿದೆ".

ಫೋರಂನಲ್ಲಿ ಪ್ರಪಂಚದ ವಿವಿದೆಡೆಗಳಿಂದ ಮಹಿಳೆಯ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡ ವಿವಿಧ ಸಾಂಸ್ಕೃತಿಕ ಪ್ರದರ್ಶನಗಳಿಗೆ, ಕಾರ್ಯಕ್ರಮಗಳಿಗೆ

ಸಾಕಷ್ಟು ಅವಕಾಶವಿತ್ತು. ಆಸ್ಟ್ರೇಲಿಯಾದಿಂದ ಒಂದು ಮಹಿಳಾ ಸರ್ಕಸ್ ಕೂಡ ಬಂದಿತ್ತು. ಸಂಜೆ ಹೊತ್ತುಗಳಲ್ಲಿ ಬೃಹತ್ ಶಾಲಾ ಮೈದಾನದಲ್ಲಿ ತಲೆಎತ್ತಿದ್ದ ಬಯಲು ರಂಗಮಂದಿರದಲ್ಲಿ ಇಡೀ ವಿಶ್ವ ಸೇರುತ್ತಿತ್ತು. ಅಲ್ಲಲ್ಲೇ ಕಂಡುಕೊಂಡ ಪ್ರಪಂಚದ ಎಲ್ಲೆಲ್ಲಿಂದಲೋ ಬಂದ ಗೆಳತಿಯರ ಜತೆಗೂಡಿ ಖುಷಿಯಿಂದ ವೀಕ್ಷಿಸಲು ವೃತ್ತಿಪರ ಪ್ರದರ್ಶನಗಳೇನೂ ಬೇಕಾಗಿರಲಿಲ್ಲ. ಆದರೆ ಕೊನೆಯ ದಿನದ ಪ್ರದರ್ಶನ ಮಾತ್ರ ಅತ್ಯದ್ಭುತ ವೃತ್ತಿಪರತೆಯದ್ದಾಗಿತ್ತು.

ಹೆಯಿರೋದಲ್ಲಿ ಭಾರತದಿಂದ ಬಂದು ಸೇರಿದ್ದವರು ಸುಮಾರು 400 ಜನ. ವಿವಿಧ ಪ್ರದೇಶಗಳ, ಗುಂಪುಗಳ ಕಾಳಜಿಗಳ ದೃಷ್ಟಿಕೋನದ ಮಹಿಳೆಯರು. ಇದೇ ಮೊದಲ ಬಾರಿಗೆ ದೇಶದಿಂದ ಹೊರಗೆ ಪ್ರಯಾಣ ಬಂದ ಹಳ್ಳಿಯ, ಸಣ್ಣಪಟ್ಟಣಗಳ ಅನೇಕ ಬಡಮಹಿಳೆಯರು ಇಲ್ಲಿದ್ದರು. ಪ್ರಯಾಣದಿಂದ ಬಳಲಿದ, ಒಗ್ಗದ ಊಟ ಮತ್ತು ಸರಿಯಾದ ನಿದ್ದೆಯಿಲ್ಲದೆ ಕಂಗೆಟ್ಟಂತೆ ಕಂಡರೂ ಇವರೆಲ್ಲಾ "ನಾವೆಲ್ಲರೂ ಒಂದೇ" ಎಂದು ಸಾರುವ ಹಾಡು, ಘೋಷಣೆಗಳೊಂದಿಗೆ ಇತರ ಭಾರತೀಯ ಮಹಿಳೆಯರನ್ನು ಸೇರಿಕೊಂಡು ಬೀಜಿಂಗ್‌ನಲ್ಲಿ ತಮ್ಮ ಆಗಮನವನ್ನು ಪ್ರಚಾರಗೊಳಿಸಿದರು.

ಭಾರತೀಯ ಮಹಿಳೆಯರು ತಮ್ಮದೇ ದೇಶದ ಗುಂಪುಗಳು ಸಂಯೋಜಿಸಿದ್ದ ಕಾರ್ಯಾಗಾರಗಳಲ್ಲಷ್ಟೇ ಅಲ್ಲದೆ ಅನೇಕ ಅಂತರ ರಾಷ್ಟ್ರೀಯ ಕಾರ್ಯಾಗಾರಗಳಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದರು. ಭಾರತೀಯ ಮಹಿಳೆಯರು ಚರ್ಚೆಗೆ ತಂದ ವಿಷಯಗಳಲ್ಲಿ ಮುಖ್ಯವಾದುದೆಂದರೆ: ಬಡತನ ಮತ್ತು ಆರ್ಥಿಕ ಸಶಕ್ತತೆಯ ಪ್ರಶ್ನೆಗಳು, ವಿವಿಧ ಸ್ತರಗಳಲ್ಲಿ ರಾಜಕೀಯ ಭಾಗವಹಿಕೆ, ಆರೋಗ್ಯ, ಶಿಕ್ಷಣ, ಪರಿಸರ, ಮಹಿಳೆಯರ ಮೇಲಿನ ಹಿಂಸಾಚಾರ, ಧಾರ್ಮಿಕ ಮತ್ತು ಜನಾಂಗೀಯ ಅನನ್ಯತೆ, ಮಾಧ್ಯಮ ಮತ್ತು ಸಂಸ್ಕೃತಿ.

ಉದಾಹರಣೆಗೆ, ಭಾರತೀಯ ಮಹಿಳೆಯರು ಸಂಯೋಜಿಸಿದ್ದ ಚುನಾಯಿತ ಮಹಿಳಾ ಪ್ರತಿನಿಧಿಗಳನ್ನು ಒಟ್ಟಿಗೆ ತಂದ ಒಂದು ಕಾರ್ಯಾಗಾರದಲ್ಲಿ ಮಹಿಳೆಯರು ಹಳ್ಳಿಯ ಪಂಚಾಯತಿಗಳನ್ನು ಸೇರಿದಂತೆ ಅನೇಕ ಸ್ತರಗಳಲ್ಲಿ ರಾಜಕೀಯ ಭಾಗವಹಿಕೆಯ ತಮ್ಮ ಅನುಭವವನ್ನು ಕುರಿತು ಮಾತನಾಡಿದರು. ಮಹಿಳೆಯರು ತಮ್ಮ ಮಾಮೂಲೀ ಕಾಯಿಲೆಗಳಿಗೆ ಚಿಕಿತ್ಸೆ ಮಾಡಿಕೊಳ್ಳಲು ಸಹಾಯವಾಗುವಂತಹ ಗಿಡಮೂಲಿಕೆಗಳ ಪ್ರದರ್ಶನ ಇನ್ನೊಂದು ಕಡೆ. ಇಂದಿನ ರಾಷ್ಟ್ರೀಯ ಮತ್ತು ಜಾಗತಿಕ ಅರ್ಥ ವ್ಯವಸ್ಥೆಯನ್ನು ಮುತ್ತಿಕೊಂಡಿರುವ ಆರ್ಥಿಕ ಅಸಮಾನತೆಯನ್ನು ಕೈಗೆತ್ತಿಕೊಳ್ಳಲು ರಾಜನಿಕ ಹೊಂದಾಣಿಕೆಗಿಂತ 'ರಾಜನಿಕಪರಿವರ್ತನೆ'ಗೆ ಇನ್ನೊಂದೆಡೆ ಕರೆಕೊಡಲಾಯಿತು. ನಾಲ್ಕನೆಯದೊಂದು ಕಾರ್ಯಾಗಾರವು ಅಲ್ಪಸಂಖ್ಯಾತ ಮಹಿಳೆಯರ ಅನನ್ಯತೆಯ ಸಮಸ್ಯೆಯದ್ದಾಗಿದ್ದರೆ ಇನ್ನೆರಡು ಕಾರ್ಯಾಗಾರಗಳು ದಲಿತ ಮಹಿಳೆಯರು ಒಳಗಾಗಿರುವ ಮೂರುಪಟ್ಟು ತುಳಿತದ ಬಗ್ಗೆ ಪ್ರಶ್ನೆಗಳನ್ನೆತ್ತಿದವು. ಭಾರತೀಯ ಮಹಿಳೆಯರು ಸಂಯೋಜಿಸಿದ್ದ ಇನ್ನೊಂದು ಕಾರ್ಯಾಗಾರವು ಬಡತನ ಮತ್ತು ನಾಗರೀಕರಣಗಳಲ್ಲಿ ಮಹಿಳೆಯರ ಮೂಲಭೂತ ಅವಶ್ಯಕತೆಯಾದ ವಸತಿಯ ಪ್ರಶ್ನೆಯನ್ನು ಎತ್ತಿಕೊಂಡಿತ್ತು.

ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೇಳಬೇಕೆಂದರೆ ಭಾರತೀಯ ಮಹಿಳೆಯರು ಬಂದು ದಿನದ ಮಹಿಳಾ ಮಾನವ ಹಕ್ಕುಗಳನ್ನು ಕುರಿತಾದ ಸಾರ್ವಜನಿಕ ವಿಚಾರಣೆ "ಮಹಿಳೆಯರ ನ್ಯಾಯಾಲಯದಲ್ಲಿ"ಯನ್ನು ಸಂಯೋಜಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದರು. ಅಲ್ಲದೆ ಪ್ರಪಂಚದಾದ್ಯಂತ ಮಹಿಳೆಯರ ಮೇಲೆ ಹೆಚ್ಚುತ್ತಲೇ ಹೋಗುತ್ತಿರುವ ಹಿಂಸಾಚಾರದ ವಿರುದ್ಧ ಪ್ರತಿಭಟನೆ ತೋರಲು ಕಪ್ಪು ಬಟ್ಟೆಯನ್ನು ತೊಟ್ಟು ಕೈಯಲ್ಲಿ ಹಚ್ಚಿದ ಮೋಂಬತ್ತಿಗಳನ್ನು ಹಿಡಿದು ಮೌನ ಮೆರವಣಿಗೆಯನ್ನು ಸಂಯೋಜಿಸುವಲ್ಲೂ ಮುಖ್ಯ ಪಾತ್ರವಹಿಸಿದ್ದರು. ಪ್ರಪಂಚದ ಇತರೆಡೆಯವರು ಸಂಯೋಜಿಸಿದ್ದ ಕಾರ್ಯಾಗಾರಗಳಿಗೆ ಮತ್ತು ಪ್ಯಾನಲ್‌ಗಳಿಗೆ ಅನೇಕ ಭಾರತೀಯ ಮಹಿಳೆಯರು ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಗೊಂಡಿದ್ದರು.

ಭಾರತೀಯ ಮಹಿಳೆಯರು ಭಾಗವಹಿಸಿದ ಅತ್ಯಂತ ಹೃದಯಸ್ಪರ್ಶೀ ಕಾರ್ಯಕ್ರಮವೆಂದರೆ, ಎಲ್ಲ ದಕ್ಷಿಣ ಏಷಿಯಾದ ದೇಶಗಳ ಮಹಿಳೆಯರು ಹೆಚ್ಚು ಕಡಿಮೆ ಏಕಾಏಕಿ ಒಂದಾಗಿ, ಉಪಖಂಡದಲ್ಲಿ ಶಾಂತಿಗಾಗಿ ಕರೆ ಕೊಡುವ ಮತ್ತು ತಮ್ಮ ಸೌಹಾರ್ದವನ್ನು ತೋರುವ ಮೆರವಣಿಗೆ. ಇದು ಫೋರಂನ ಅತಿದೊಡ್ಡ ಪ್ರದರ್ಶನವಷ್ಟೇ ಆಗಿರಲಿಲ್ಲ, ಇಂಡಿಯಾ, ಪಾಕಿಸ್ತಾನಗಳ ಸರ್ಕಾರೀ ಪ್ರತಿನಿಧಿಗಳು ವಿಶ್ವ ಸಮಾವೇಶದಲ್ಲಿ ಅನವಶ್ಯಕವಾಗಿ ಬಿಗಿಯುತ್ತಿದ್ದ ಕಿರಿಕಿರಿಯ ಭಾಷಣಗಳಿಗೆ ಪೂರ್ಣವೇ

ವಿರೋಧವಾದುದಾಗಿತ್ತು. ಶಾಂತಿ ಮೆರವಣಿಗೆಯು ಕೊನೆಯಲ್ಲಿ ಭಾರತ ಮತ್ತು ಪಾಕಿಸ್ತಾನಗಳ ಮಹಿಳೆಯರ ನಡುವೆ ಸಂಘರ್ಷವುಂಟಾಯಿತೆಂಬ ಪತ್ರಿಕಾ ವರದಿ ಸುಳ್ಳು. ನಡೆದದ್ದೇನೆಂದರೆ, ಮೆರವಣಿಗೆಯ ಉಚ್ಛ್ರಾಯದಲ್ಲಿ ಧಾರ್ಮಿಕ ಸಂಕೇತಗಳೆಂದು ಗ್ರಹಿಸಿಕೊಂಡದ್ದರ ಬಳಕೆ ಮಾಡಬೇಕೋ ಮಾಡಬಾರದೋ ಎಂಬಲ್ಲಿ ಮಹಿಳೆಯರ ಮಧ್ಯೆ ವಾಗ್ವಾದ ನಡೆಯಿತು. ಎರಡು ಗುಂಪಿನಲ್ಲೂ ಭಾರತ ಮತ್ತು ಪಾಕಿಸ್ತಾನಗಳೆರಡರ ಮಹಿಳೆಯರೂ ಇದ್ದರು.

ಅಂತಿಮವಾಗಿ, ಭಾಗವಹಿಸಿದ್ದ ಮಹಿಳೆಯರು ಅವರು ಯಾರೇ ಆಗಿರಲಿ, ಪ್ರಪಂಚದ ಯಾವ ಭಾಗದಿಂದಲೇ ಬಂದಿರಲಿ ಅವರ ವಿಶೇಷ ಆಸಕ್ತಿ - ದೃಷ್ಟಿಕೋನಗಳೇನೇ ಇರಲಿ, ಅವರಲ್ಲಿದ್ದ ಗಂಭೀರತೆ, ಬದ್ಧತೆ ಮತ್ತು ದೃಢ ನಿಶ್ಚಯಗಳು ಮಾತ್ರ ನಿಜಕ್ಕೂ ಉತ್ತೇಜನಕಾರಿಯಾಗಿದ್ದವು. ಒಂದು ರೀತಿ ಕಕ್ಕಾಬಿಕ್ಕಿ ಮಾಡಿಬಿಡುವಂತಿದ್ದ ಕಾರ್ಯಕ್ರಮ ಸ್ಥಳದ ರಚನೆ, ಕಾರ್ಯಕ್ರಮ ನಡೆಸುವ ಮತ್ತು ಮಲಗುವ ಸ್ಥಳಗಳಲ್ಲಿ ಇದ್ದ ಕುಂದು-ಕೊರತೆ ಹತ್ತು ದಿನಗಳಲ್ಲಿ ಹಲವಾರು ಬಾರಿ ಸುರಿದು ನೆನೆಸಿದ ಮಳೆ, ಇವ್ಯಾವುದೂ ಭಾಗವಹಿಸಿದ್ದವರ ಚೈತನ್ಯವನ್ನು ಕುಗ್ಗಿಸಲು ಸಾಧ್ಯವಾಗಲಿಲ್ಲ. ಕೊನೆಗಳಿಗೆಯಲ್ಲಿ ಬ್ಯಾಗಿನಲ್ಲಿ ತುರುಕಿಕೊಂಡ ಕೊಡೆ, ರೈನು ಕೋಟುಗಳಿಂದ ಸಜ್ಜಿತರಾಗಿ ಮಳೆಯೇ ಮುಂತಾದ ಅಡೆತಡೆಗಳನ್ನು ಧೈರ್ಯವಾಗಿ ಎದುರಿಸುತ್ತಾ ಆ್ಯಂಗ್ ಸಾನ್ ಸೂಕಿ ಹೇಳಿದ "ಪ್ರಪಂಚದ ಇತಿಹಾಸದಲ್ಲೇ ಅತ್ಯಂತ ದೊಡ್ಡ ಮಹಿಳೆಯರ (ಕೆಲ ಧೀರ ಪುರುಷರ) ಮೇಳ"ದಲ್ಲಿ ಸಂಪೂರ್ಣವಾಗಿ ಭಾಗವಹಿಸಿದ್ದರು.

ವ್ಯವಹಾರ ಚತುರತೆಗೊಂದು ಸಮಯ

ಬೀಜಿಂಗ್‌ನ ವಿಶ್ವಸಮಾವೇಶದಲ್ಲೂ ಮಳೆ ಸುರಿಯಿತು. ಆದರೆ ಅಲ್ಲಿದ್ದವರಿಗೆ ಅದು ಬಾಧಿಸಲಿಲ್ಲ. ಅಲ್ಲಿ ಚಟುವಟಿಕೆಗಳು ಬಹುಪಾಲು ಅಂತರ ರಾಷ್ಟ್ರೀಯ ಸಮಾವೇಶ ಕೇಂದ್ರದ ಸುರಕ್ಷಿತ ಗೋಡೆಗಳ ಒಳಗೇ ನಡೆಯುತ್ತಿದ್ದವು. ಇನ್ನು ಕೆಲವು ಅದರಷ್ಟೇ ವೈಭವದ ಕಟ್ಟಡಗಳಲ್ಲಿ ನಡೆಯುತ್ತಿದ್ದು ಅವೆಲ್ಲ ಒಂದಕ್ಕೊಂದು ಹೊಂದಿಕೊಂಡಂತೆ ಇಲ್ಲವೇ ತೀರಾ ಹತ್ತಿರತ್ತಿರಕ್ಕೆ ಇದ್ದವು. ಇದರ ಜತೆಗೆ ವಿಧವಿಧದ ವಾಹನ ವ್ಯವಸ್ಥೆ ಕೂಡ ಇತ್ತು.

ವಿಶ್ವ ಸಮಾವೇಶವು ಸಪ್ಟೆಂಬರ್ 4ರಂದು ಚೀನಾ ಸರ್ಕಾರ ಏರ್ಪಡಿಸಿದ್ದ ಅಭೂತಪೂರ್ವ ಸ್ವಾಗತ ಸಮಾರಂಭದೊಂದಿಗೆ ಪ್ರಾರಂಭವಾಯಿತು. ಅದೃಷ್ಟವಶಾತ್ ಔಪಚಾರಿಕವಾದ ಭಾಷಣಗಳು ಕೆಲವೇ ಕೆಲವಿದ್ದು ಸಂಕ್ಷಿಪ್ತವಾಗಿದ್ದುದರಿಂದ, ಬಹುಬೇಗ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಾರಂಭಗೊಂಡು ಶ್ರೀಮಂತ ಕಲಾ ಲೋಕಕ್ಕೆ ಪ್ರವೇಶಿಸಲು ಸಾಧ್ಯವಾಯಿತು.

ಕೆಲವೇ ಔಪಚಾರಿಕ ಭಾಷಣಗಳಲ್ಲಿ ವಿಶೇಷವಾಗಿ ಆಹ್ವಾನಿತರಾಗಿದ್ದ ಬೆನಜೀರ್ ಭುಟ್ಟೋರ ಭಾವನಾತ್ಮಕ ಭಾಷಣವೂ ಒಂದಾಗಿತ್ತು (ಕಳೆದ ವರ್ಷ ಕೈರೋದಲ್ಲಿ ನಡೆದ ವಿಶ್ವಸಂಸ್ಥೆಯ 'ಜನಸಂಖ್ಯೆ ಮತ್ತು ಅಭಿವೃದ್ಧಿ'ಯ ಸಮಾವೇಶದಲ್ಲೂ ಆಕೆ ವಿಶೇಷ ಆಹ್ವಾನಿತರಾಗಿದ್ದರು. ಅನವಶ್ಯಕವಾಗಿ ಹೇಳಿದ್ದನ್ನೇ ಹೇಳುತ್ತಾ ಹೋಗುವ ಈಕೆಗಿಂತ ಉತ್ತಮವಾಗಿ ಮಾತನಾಡಬಲ್ಲ ಅನೇಕ ಮಹಿಳಾ ನಾಯಕಿಯರಿದ್ದಾರೆ!)

ಕಾಶ್ಮೀರವನ್ನೆತ್ತಿಕೊಂಡು ಇಂಡಿಯಾದ ವಿರುದ್ಧ ಆಕೆ ಎತ್ತಿದ ಆಕ್ಷೇಪಣೆಯ ಹರಿತ ಕೈರೋಗಿಂತ ಬೀಜಿಂಗ್‌ನಲ್ಲಿ ಸ್ವಲ್ಪ ತಗ್ಗಿತ್ತು. ಹೀಗೆ ಮಾತಿನ ಮಧ್ಯೆ (ಬೋಸ್ನಿಯಾ ಮತ್ತು ಹರ್‌ಸೆನ್‌ಗೋವಿನಾದ ಸನ್ನಿವೇಶ) ಆಕೆ ತೂರಿಸಿದ ಆಕ್ಷೇಪಣೆ ಕೂಡ ಭಾರತ ಮತ್ತು ಪಾಕಿಸ್ತಾನೀ ಪ್ರತಿನಿಧಿಗಳ ಮಧ್ಯೆ ಮಾತಿನ ಚಕಮಕಿ ಹತ್ತಿಕೊಳ್ಳಲು ಸಾಕಾಗುವಷ್ಟಿತ್ತು. ಇದು ಮೂರು ದಿನಗಳವರೆಗೂ ನಿಗಿನಿಗಿ ಉರಿಯುತ್ತಲೇ ಇತ್ತು.

ನಂತರದಲ್ಲಿ ಸಮಾವೇಶವು ತನ್ನ ಯಾವತ್ತೂ ಆಗುಹೋಗುಗಳಿಗೆ ಹೊಂದಿಕೊಂಡಿತು. ಇಲ್ಲಿ ಎರಡು ಸಮಾನಾಂತರ ಪ್ರಕ್ರಿಯೆಗಳಿದ್ದವು. ಪ್ರತಿದಿನದ ಪ್ಯಾನಲ್‌ನಲ್ಲಿ ಆಯಾ ದೇಶದ ಪ್ರತಿನಿಧಿಗಳ ಮುಖ್ಯಸ್ಥರಾಗಿ ಬಂದಿದ್ದವರು (ಭಾರತದ ಕಡೆಯಿಂದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಮಾಧವರಾವ್ ಸಿಂಧ್ಯಾ ಇದ್ದರು) ಮೊದಲೇ ಊಹಿಸಬಹುದಾಗಿದ್ದಂತೆ ತಮ್ಮ ತಮ್ಮ ಸರ್ಕಾರಗಳು ಮಹಿಳಾ ಸಮೂಹದ ಏಳ್ಗೆಗಾಗಿ ಕೈಗೊಂಡಿರುವ ಶ್ರಮದ ಕತೆಗಳನ್ನು ಹೇಳುವ ಭಾಷಣಗಳನ್ನು ಮಾಡುತ್ತಿದ್ದರು. ಪ್ಯಾನಲ್‌ನಲ್ಲಿ ಮಾತನಾಡಲು ಅವಕಾಶ ಪಡೆದಿದ್ದ ಇತರರೆಂದರೆ ಪ್ರಾದೇಶಿಕ ಬ್ಲಾಕ್‌ಗಳ

(ಅಂದರೆ ಯೂರೋಪಿಯನ್ ಯೂನಿಯನ್, ಇಂಡಿಯಾವು ಸೇರುವ ಜಿ-77 ದೇಶಗಳು ಮುಂತಾದವು) ನಾಯಕರು, ವಿಶ್ವ ಸಂಸ್ಥೆಯ ಮತ್ತು ಇತರೆ ಅಂತರ ರಾಷ್ಟ್ರೀಯ ಏಜನ್ಸಿಗಳ, ಸಂಘ - ಸಂಸ್ಥೆಗಳ ಮುಖ್ಯಸ್ಥರುಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಕೆಲವೇ ಪ್ರತಿನಿಧಿಗಳು.

ಅದೇನೇಯಾದರೂ, ಸಮಾವೇಶದ ಪ್ರಮುಖ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದುದು ಎರಡು "ಕಾರ್ಯ ನಿರ್ವಹಣಾ ಗುಂಪುಗಳು". ಪ್ರತಿಯೊಂದು ದೇಶಗಳಿಂದಲೂ ನಿರ್ದಿಷ್ಟ ಸಂಖ್ಯೆಯ ಪ್ರತಿನಿಧಿಗಳಿದ್ದ "ಪ್ರಧಾನ ಸಮಿತಿ"ಯು ಈ ಗುಂಪನ್ನು ರೂಪಿಸಿತ್ತು. ಫಿಲಿಪೈನ್ಸ್‌ನ ಪೆಟ್ರಿಸಿಯಾ ಲಿಕುಯಾನ್‌ರನ್ನು (ಪ್ರಸ್ತುತದ ಮಹಿಳೆಯರ ಸ್ಥಾನಮಾನವನ್ನು ಕುರಿತ ವಿಶ್ವಸಂಸ್ಥೆಯ ಕಮಿಷನ್‌ಗೂ ಇವರೇ ಅಧ್ಯಕ್ಷರು) ಅಧ್ಯಕ್ಷರನ್ನಾಗಿ ಹೊಂದಿದ್ದ ಈ ಸಮಿತಿ ಮತ್ತು ಗುಂಪುಗಳು ಸಮಾವೇಶದ ಅಧಿಕೃತ ದಾಖಲೆಗಳಾದ ಬೀಜಿಂಗ್ ಡಿಕ್ಲರೇಷನ್ ಮತ್ತು ಕ್ರಿಯಾಯೋಜನೆಗಳ ಬಗ್ಗೆ ಒಂದು ಒಮ್ಮತಕ್ಕೆ ತಲಪುವಂತಹ ಅಷ್ಟೇನೂ ಸುಲಭವಲ್ಲದ ಕೆಲಸವನ್ನು ಮುಂದಿಟ್ಟುಕೊಂಡಿದ್ದವು. ಮೊದಲನೆಯದು ಮಹಿಳಾ ಪ್ರಶ್ನೆಗೆ ಬದ್ಧತೆಯನ್ನು ಕೋರುವ ಸಾಮಾನ್ಯ ಹೇಳಿಕೆಯಾಗಿದ್ದರೆ ಎರಡನೆಯದು ಈ ಶತಮಾನದ ಕೊನೆಯ ವರ್ಷಗಳಲ್ಲಿ ವಿಶ್ವವನ್ನು ಸಮಾನತೆ, ಅಭಿವೃದ್ಧಿ ಮತ್ತು ಶಾಂತಿಗಳೆಡೆಗೆ ಮಹಿಳೆಯರ ಮುನ್ನಡೆಯ ಮೂಲಕ ಕೊಂಡೊಯ್ಯುವಲ್ಲಿ ನಿರ್ದೇಶನ ನೀಡುವಂತಹ ಒಂದು ವಿವರವಾದ ನೀಲಿನಕ್ಷೆ.

ರಾಜಕೀಯ, ಆರ್ಥಿಕತೆ, ಪರಿಸರ, ಧರ್ಮ ಮತ್ತು ಸಾಮಾಜಿಕ ರಚನೆಗಳೇ ಮುಂತಾದವುಗಳ ಸಂಬಂಧದಲ್ಲಿ ಅನೇಕಾನೇಕ ವಾದಗ್ರಸ್ತ ಪ್ರಶ್ನೆಗಳನ್ನು ಎತ್ತುವ ದಾಖಲೆಯನ್ನು ಸುಮಾರು 200 ದೇಶಗಳವರು ಕುಳಿತು ಸಮಾಲೋಚಿಸಿ ಸರ್ವಸಮ್ಮತಿಗೆ ಬರುವುದು ಬಾಯಿಯಲ್ಲಿ ಹೇಳಿದಷ್ಟು ಸುಲಭದ ಕೆಲಸವಲ್ಲ.

ಪ್ರಪಂಚದಲ್ಲಿ ಮಹಿಳೆಯರ ಸ್ಥಿತಿಗತಿ ಉತ್ತಮಗೊಳ್ಳುವುದೇ ಬೇಕಾದರೆ ಈ ಕೆಳಗಿನ ಇನ್ನೂ ಮಹಿಳೆಯರ ಮುನ್ನಡೆಗೆ ಆತಂಕಕಾರಿಯಾಗಿರುವ ಅಂಶಗಳನ್ನು ಕೈಗೆತ್ತಿಕೊಳ್ಳಬೇಕೆಂದು ಕ್ರಿಯಾಯೋಜನೆ ಹೇಳುತ್ತದೆ: ಮಹಿಳೆಯರ ಮೇಲೆ ಹೆಚ್ಚುತ್ತಲೇ ಹೋಗುತ್ತಿರುವ ಬಡತನದ ಹೊರೆ; ಮಹಿಳೆಯರಿಗೆ ಇರುವ ತೀರಾ ಕಡಿಮೆ ಶಿಕ್ಷಣಾವಕಾಶ; ಮಹಿಳೆಯರಿಗೆ ಆರೋಗ್ಯ ಸೇವೆಯ ಕೊರತೆ; ಮಹಿಳೆಯರ ಮೇಲಿನ ಹಿಂಸಾಚಾರ; ಮಹಿಳೆಯರ ಮೇಲೆ ಶಸ್ತ್ರ ಸಂಘರ್ಷದ ಪರಿಣಾಮ; ಆರ್ಥಿಕ ರಚನೆಗಳಲ್ಲಿ, ಪ್ರಕ್ರಿಯೆಗಳಲ್ಲಿ ಮತ್ತು ತೀರ್ಮಾನಗಳಲ್ಲಿ ಮಹಿಳೆಯರಿಗೆ ಅಸಮಾನ ಅವಕಾಶ; ರಾಜಕೀಯ ಅಧಿಕಾರ ಹಂಚಿಕೆ ಮತ್ತು ತೀರ್ಮಾನಗಳಲ್ಲಿ ಲಿಂಗ ಅಸಮಾನತೆ; ಲಿಂಗ ಅಸಮಾನತೆಯನ್ನು ಹೋಗಲಾಡಿಸುವಂತಹ ಸಾಂಸ್ಥಿಕ ಸಂಯೋಜನೆಗಳ ಕೊರತೆ; ಮಹಿಳೆಯ ಮಾನವ ಹಕ್ಕುಗಳನ್ನು ಗುರುತಿಸದೇ ಇರುವುದು; ಮಾಧ್ಯಮಗಳಲ್ಲಿ ಮಹಿಳೆಯರಿಗೆ ಅವಕಾಶದ ಕೊರತೆ; ಪರಿಸರದ ಅವನತಿ; ಮತ್ತು ಹೆಣ್ಣುಮಕ್ಕಳ ಮೇಲಿನ ತಾತ್ಸಾರ. ಈ ಎಲ್ಲ ಅಂಶಗಳ ಸಂಬಂಧದಲ್ಲೂ ಇರುವ ಸಮಸ್ಯೆಯನ್ನು ಮೊದಲು ಗುರುತಿಸಿ ಅನಂತರ ತಂತ್ರೋಪಾಯದ ಉದ್ದೇಶಗಳನ್ನು ಪ್ರಸ್ತಾಪಿಸುತ್ತಾ ಈ ಉದ್ದೇಶಗಳ ಸಾಧನೆಗೆ ನಿರ್ದಿಷ್ಟ ಕ್ರಿಯೆಗಳನ್ನು ಈ ಬೃಹತ್ ದಾಖಲೆ ಸಲಹಿಸುತ್ತದೆ.

ಸಮಾವೇಶದ ಸಚಿವಾಲಯ ತಯಾರಿಸಿದ ಈ ಕ್ರಿಯಾಯೋಜನೆಯು ತನ್ನ ಎರಡು ವರ್ಷಗಳ ಅನೇಕ ಪೂರ್ವಭಾವೀ ಕಾರ್ಯಕ್ರಮಗಳ ಪ್ರಯಾಣದಲ್ಲಿ ಸಾಕಷ್ಟು ಜಗ್ಗಾಟಕ್ಕೆ ಒಳಪಟ್ಟಿತು. ಎರಡು ಪೂರ್ವಸಿದ್ಧತಾ ಸಮಿತಿ ಸಭೆಗಳು ಮತ್ತು ನ್ಯೂಯಾರ್ಕಿನ ಒಂದು ಅನೌಪಚಾರಿಕಾ ಸಭೆ (ಇಲ್ಲಿ ಎಲ್ಲ ಸರ್ಕಾರಗಳೂ ಹಾಜರಿದ್ದವು), ಐದು ಪ್ರಾದೇಶಿಕ ಸಮಾವೇಶಗಳು (ಇಲ್ಲಿ ಆಯಾ ಪ್ರಾದೇಶಿಕ ವಲಯಕ್ಕೆ ಸೇರುವ ದೇಶಗಳು ತಮ್ಮ ಅಭಿಪ್ರಾಯ ಹೇಳುವ ಅವಕಾಶ ಇತ್ತು) ಮತ್ತು ಬೀಜಿಂಗ್ ಸಮಾವೇಶಕ್ಕೆ ಮುನ್ನ ನಡೆದ ಅನೇಕ ಸಮಾಲೋಚನ ಸಭೆಗಳು ಇಲ್ಲೆಲ್ಲಾ ಕ್ರಿಯಾಯೋಜನೆ ಚರ್ಚೆಗೆ ಬಂದಿತ್ತು. ಭಾರತವನ್ನು ಸೇರಿದಂತೆ ವಿಶ್ವದ ಎಲ್ಲೆಡೆಯ ಅನೇಕ ಮಹಿಳಾ ಗುಂಪುಗಳು - ಜಾಲಗಳು ಕ್ರಿಯಾಯೋಜನೆಗೆ ಮರುರೂಪು ಕೊಡುವಲ್ಲಿ ಮುಖ್ಯ ಪಾತ್ರ ವಹಿಸಿದ್ದವು. ದಾಖಲೆಯಲ್ಲಿ ಮಹಿಳೆಯರ ಕಾಳಜಿಗಳು ಮತ್ತು ದೃಷ್ಟಿಕೋನಗಳನ್ನು ಸೇರಿಸುವಲ್ಲಿ, ಉಳಿಸುವಲ್ಲಿ ಸರ್ಕಾರೀ ಪ್ರತಿನಿಧಿಗಳೊಂದಿಗೆ ಲಾಬಿ ನಡೆಸಿದ್ದವು.

ಈ ಎಲ್ಲ ಸಂಕೀರ್ಣವಾದ ದೀರ್ಘಕಾಲದ ಸಮಾಲೋಚನೆಗಳ ನಡುವೆಯೂ 121 ಪುಟಗಳ 362ಪ್ಯಾರಾ

ಗಳ ಕ್ರಿಯಾಯೋಜನೆಯು ಬೀಜಿಂಗ್ ತಲುಪಿದ್ದು ಮಾತ್ರ ವಾದ-ವಿವಾದಗಳಿಂದ ನಜ್ಜುಗುಜ್ಜಾಗಿಯೇ. ಅದರ ಅನೇಕ ಭಾಗಗಳು ಬ್ರಾಕೆಟ್ಟುಗಳಲ್ಲಿದ್ದವು (ಅಂದರೆ, ವಿಶ್ವಸಂಸ್ಥೆಯ ಕ್ರಿಯೆಗಳಲ್ಲಿ ಹೀಗೆ ಬ್ರಾಕೆಟ್ಟುಗಳಲ್ಲಿದರೆ ಅವಿನ್ನೂ ಸಮಾಲೋಚಿಸತಕ್ಕವು ಎಂದರ್ಥ).

ವಿವಾದಗ್ರಸ್ತ ಅಂಶಗಳು ಮೂರು ವಿಸ್ತಾರ ಗುಂಪುಗಳಾಗಿ ಬರುತ್ತವೆ :

- ವ್ಯಕ್ತಿಗಳಾಗಿ, ಕುಟುಂಬದಲ್ಲಿ ಮತ್ತು ಸಾಂಸ್ಕೃತಿಕ ರಚನೆಗಳಲ್ಲಿ ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದ ವಿವಾದ. ಇಲ್ಲಿನ ವಿವಾದಕ್ಕೆ ಮುಖ್ಯವಾಗಿ ಗ್ರಾಸ ಒದಗಿಸಿರುವದೆಂದರೆ, ಅನೇಕ ಸರ್ಕಾರಗಳು ಮುಖ್ಯವಾಗಿ ಧಾರ್ಮಿಕ ಸಂಪ್ರದಾಯವಾದೀ ಪ್ರಭಾವ ಹೊಂದಿರುವ ಸರ್ಕಾರಗಳು ಒಪ್ಪಿಕೊಳ್ಳಲು ನಿರಾಕರಿಸುತ್ತಿರುವ ಮಹಿಳೆಯರ ಸಂತಾನ ಸಂಬಂಧಿ ಹಕ್ಕುಗಳು ಮತ್ತು ಮಾನವ ಹಕ್ಕುಗಳು.
- ಮಾರುಕಟ್ಟೆ ಬೆಳವಣಿಗೆ, ಅಂತರರಾಷ್ಟ್ರೀಯ ವ್ಯಾಪಾರ ಶರತ್ತುಗಳು, ಸಾಲ ಮತ್ತು ರಾಚನಿಕ ಹೊಂದಾಣಿಕೆಯ ಕಾರ್ಯಕ್ರಮಗಳು ಮತ್ತದರ ಪರಿಣಾಮಗಳು ಇವನ್ನೆಲ್ಲಾ ಒಳಗೊಂಡಂತೆ ಪರಿಸರ ಮತ್ತು ಜಾಗತಿಕ ಆರ್ಥಿಕತೆ ಹಿಡಿಯುತ್ತಿರುವ ದಿಕ್ಕನ್ನು ಕುರಿತ ವಾದ-ವಿವಾದ. ಉತ್ತರದ(ಅಂದರೆ, ಕೈಗಾರೀಕೃತ) ದೇಶಗಳ ಮತ್ತು ದಕ್ಷಿಣದ(ಅಭಿವೃದ್ಧಿ ಹೊಂದುತ್ತಿರುವ) ದೇಶಗಳ ನಡುವೆ ಈ ಅಂಶಗಳ ಸಂಬಂಧದಲ್ಲೇ ಒಡಕಿತ್ತು.
- ಕ್ರಿಯಾಯೋಜನೆಯಲ್ಲಿನ ಸಾಂಸ್ಥಿಕ ಸಂಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಜಾರಿಗೆ ತರಲು ಬೇಕಾದ ಸಂಪನ್ಮೂಲಗಳನ್ನು, ಹಣಕಾಸನ್ನು ದೊರಕಿಸಿಕೊಡುವಲ್ಲಿ ಶ್ರೀಮಂತ ದೇಶಗಳು ವಿರೋಧ ವ್ಯಕ್ತಪಡಿಸಿದವು. ಕೋಪನ್‌ಹೇಗನ್‌ನಲ್ಲಿನ ಇತ್ತೀಚಿನ ಸಾಮಾಜಿಕ ಅಭಿವೃದ್ಧಿಯ ವಿಶ್ವ ಸಮಾವೇಶವೂ ಸೇರಿದಂತೆ ಎಲ್ಲೂ ಹೆಚ್ಚಿನ ಸಂಪನ್ಮೂಲಗಳನ್ನು ಬಿಟ್ಟುಕೊಡಲು ತಯಾರಿಲ್ಲದ ಈ ದೇಶಗಳು ಮಹಿಳಾ ವಿಶ್ವ ಸಮಾವೇಶದಲ್ಲೂ ಅದೇ ಪಟ್ಟು ಹಿಡಿದಿದ್ದವು.

ಬ್ರಾಕೆಟ್ಟನಲ್ಲಿದ್ದ ಅನೇಕ ಅಂಶಗಳು ಈಗಾಗಲೇ ನಡೆದು ಹೋಗಿರುವ ವಿಶ್ವಸಂಸ್ಥೆಯ ಅನೇಕ ಸಮಾವೇಶಗಳಲ್ಲಿ ಚರ್ಚಿತಗೊಂಡು ಒಪ್ಪಿತಗೊಂಡಂತವೇ ಆಗಿದ್ದವು. ಉದಾಹರಣೆಗೆ, ಮಹಿಳೆಯರ ಸಂತಾನ ಮತ್ತು ಲೈಂಗಿಕ ಹಕ್ಕುಗಳು, ಆರೋಗ್ಯ, ಪೋಷಕತನದ ಹಕ್ಕುಗಳು ಮತ್ತು ಕೌಟುಂಬಿಕ ಮಾದರಿಗಳಿಗೆ ಸಂಬಂಧಿಸಿದ ಭಾಗಗಳೆಲ್ಲಾ ಕಳೆದ ವರ್ಷ ಕೈರೋದಲ್ಲಿ ನಡೆದ ಜನಸಂಖ್ಯೆ ಮತ್ತು ಅಭಿವೃದ್ಧಿ (ICPD)ಯ ವಿಶ್ವಸಮಾವೇಶದಲ್ಲಿ ತೀವ್ರ ಚರ್ಚೆಗೊಳಪಟ್ಟು ಕೊನೆಗೆ ಒಪ್ಪಿತಗೊಂಡಿದ್ದವು. ಬೀಜಿಂಗ್‌ನ ಕ್ರಿಯಾಯೋಜನೆಗಳಲ್ಲಿ ಪುನಃ ಅವುಗಳು ಬ್ರಾಕೆಟ್ಟನಲ್ಲೇ ಉಳಿದದ್ದು, ಕೈರೋ ಸಮಾವೇಶದಲ್ಲಿ ಪಡೆಕೊಂಡದ್ದನ್ನು ಅನೂರ್ಜಿತಗೊಳಿಸುವ ಸಂಪ್ರದಾಯವಾದೀ ಶಕ್ತಿಗಳ ಎಡಬಿಡದ ಪ್ರಯತ್ನಕ್ಕೆ ದ್ಯೋತಕವಾಗಿತ್ತು. ಕೌಟುಂಬಿಕ ರಚನೆಗಳಲ್ಲಿ ಸಮಾತತ್ವ ತರುವ ಮತ್ತು ತಮ್ಮ ದೇಹ - ಬದುಕುಗಳ ಮೇಲೆ ತಮ್ಮದೇ ನಿಯಂತ್ರಣ ಸಾಧಿಸುವ ಮಹಿಳೆಯರ ಬೆಳೆಯುತ್ತಿರುವ ಶಕ್ತಿಯನ್ನು ಹೊಸಕಿ ಹಾಕುವ ಪ್ರಯತ್ನವಾಗಿದ್ದಿತು. ಮಾನವ ಹಕ್ಕುಗಳ ಸಂಬಂಧದಲ್ಲಿ ಮೂಡಿಬಂದ ಬ್ರಾಕೆಟ್ಟುಗಳು ಕೂಡ 1993ರಲ್ಲಿ ವಿಯನ್ನಾದಲ್ಲಿ ನಡೆದ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಮಾವೇಶದಲ್ಲಿ ಮಹಿಳೆಯರು ಮಾಡಿದ ಸಾಧನೆಯನ್ನು ಅನೂರ್ಜಿತಗೊಳಿಸುವಂತವೇ ಆಗಿದ್ದವು. ಅಲ್ಲಿ "ಮಹಿಳಾ ಹಕ್ಕುಗಳೇ ಮಾನವ ಹಕ್ಕುಗಳು" ಎಂದು ಘೋಷಿಸಲಾಗಿತ್ತು. ಇದನ್ನು ಒಪ್ಪಿಕೊಳ್ಳಲು ತಯಾರಿಲ್ಲದ ಸಂಪ್ರದಾಯವಾದೀ ಶಕ್ತಿಗಳು ಮಾನವ ಹಕ್ಕುಗಳ ವಿಶ್ವಾತ್ಮಕತೆಯನ್ನು ವಾದಕ್ಕೆಳೆಯುತ್ತಾ, ನಿರ್ದಿಷ್ಟ ಧರ್ಮಗಳ ಮತ್ತು ಸಂಸ್ಕೃತಿಗಳ ಸನ್ನಿವೇಶಕ್ಕನುಗುಣವಾಗಿ ಮಾನವ ಹಕ್ಕುಗಳನ್ನು ವ್ಯಾಖ್ಯಿಸುವ ಹಕ್ಕನ್ನು ಎತ್ತಿಹಿಡಿದಿದ್ದವು.

ಮಾರುಕಟ್ಟೆ ಮತ್ತು ಜಾಗತಿಕ ಆರ್ಥಿಕತೆಯ ಸಂಬಂಧದಲ್ಲಿ ಎದ್ದ ವಿವಾದಗಳು ದೊಡ್ಡಮಟ್ಟದಲ್ಲಿ ರೂಪಿಸುವ ಆರ್ಥಿಕ ನೀತಿಗಳು, ರಾಚನಿಕ ಹೊಂದಾಣಿಕೆ, ಸಾಲ ಮತ್ತು ಮೌಲ್ಯವಿಲ್ಲದ ಕೆಲಸ ಮುಂತಾದವಕ್ಕೆ ಸಂಬಂಧಿಸಿದ್ದವು. ಈ ಮೌಲ್ಯವಿಲ್ಲದ ಕೆಲಸವನ್ನು ಪ್ರಪಂಚದಾದ್ಯಂತ ಮಾಡುತ್ತಿರುವವರು ಬಹುಪಾಲು ಮಹಿಳೆಯರೇ ಎಂಬಂಶವನ್ನು ಸಮಾವೇಶಕ್ಕೆ ಮುನ್ನ ವಿಶ್ವಸಂಸ್ಥೆಯ ಅಭಿವೃದ್ಧಿ ಅನುದಾನ ಹೊರತಂದ ವರದಿ ಸ್ಪಷ್ಟಪಡಿಸಿತ್ತು.

ದಿನಕಳೆದಂತೆ ಈ ವಾದಗ್ರಸ್ತ ಅಂಶಗಳ ವಿಸ್ತಾರತೆಯಲ್ಲೇ ಇನ್ನೂ ಅನೇಕ ವಿಲಕ್ಷಣ ಅಂಶಗಳು ಸೇರಿ ಹೋಗಿದ್ದು ಸ್ಪಷ್ಟವಾಗತೊಡಗಿತು. ಹೀಗಾಗಿ "ವಿಶ್ವಾತ್ಮತ ಮಾನವ ಹಕ್ಕುಗಳು" VS "ಮಾನವ ಹಕ್ಕುಗಳ ವಿಶ್ವಾತ್ಮಕತೆ" "ಸಮಾನತೆ" VS ಸಮತ್ವ" ಮತ್ತು ಗಂಡು ಮತ್ತು ಹೆಣ್ಣುಮಕ್ಕಳಿಗೆ ಸಮಾನ ಉತ್ತರಾಧಿಕಾರತ್ವಹಕ್ಕುಗಳು ಮುಂತಾದ ಚರ್ಚೆಗೆ ಆಸ್ಪದವಾಗಿತ್ತು. ಅದೃಷ್ಟವಶಾತ್ 'ಲಿಂಗ' (gender) ಎಂಬ ಪದದ ಸುತ್ತು ಎದ್ದ ಹಾಸ್ಯಾಸ್ಪದ ಪ್ರಶ್ನೆಗಳು ಬೇಗದರಲ್ಲೇ ಮಾಯವಾಗಿದ್ದವು.

ವಿಶ್ವಸಮಾವೇಶದೊಳಕ್ಕೆ ಪ್ರವೇಶ ಪಡೆದ NGO ಫೋರಂ ಪ್ರತಿನಿಧಿಗಳು ಕೆಲವು ವಿಶೇಷ ಆಸಕ್ತಿಯ ಮತ್ತು ಕೆಲವು ಸಾಮಾನ್ಯವಾದ ಗುಪ್ತಕೂಟಗಳನ್ನು ನಡೆಸಿದ್ದರು. ಸಮಾವೇಶದ ದಾಖಲೆಯನ್ನು ಹೆಚ್ಚು ಬಲಿಷ್ಟಗೊಳಿಸಿ ಅದು ಮಹಿಳೆಯರ ಅವಶ್ಯಕತೆಗಳು ಮತ್ತು ದೃಷ್ಟಿಕೋನಗಳನ್ನು ಸಾಧ್ಯವಾದಷ್ಟು ಪ್ರತಿಬಿಂಬಿಸುವಂತೆ ಮಾಡಲು ಸರ್ಕಾರೀ ಪ್ರತಿನಿಧಿಗಳೊಂದಿಗೆ ಲಾಬಿ ನಡೆಸಲು ಈ ಕೂಟಗಳಲ್ಲಿ ತಯಾರಿ ಮಾಡಿಕೊಳ್ಳಲಾಗುತ್ತಿತ್ತು.

ಕೆಲವು ಕೂಟಗಳು ಪ್ರಾದೇಶಿಕ ಅನನ್ಯತೆಯವಾಗಿದ್ದರೆ (ದಕ್ಷಿಣ ಏಷಿಯಾ, ಆಫ್ರಿಕ ಇತ್ಯಾದಿ) ಮತ್ತೆ ಕೆಲವು ವರ್ಣಜನಾಂಗೀಯ ಅನನ್ಯತೆಯನ್ನು ಆಧಾರವಾಗಿಸಿಕೊಂಡಿದ್ದವು (ಕಪ್ಪು ಮಹಿಳೆಯರು, ದೇಸೀಯ ಮಹಿಳೆಯರು ಇತ್ಯಾದಿ). ಇನ್ನೂ ಕೆಲವು ನಿರ್ದಿಷ್ಟ ಪ್ರಶ್ನೆಗಳನ್ನು ಆಧರಿಸಿದ್ದವು (ಆರ್ಥಿಕ ಸಮಾನತೆ, ಆರೋಗ್ಯ, ಮಾನವ ಹಕ್ಕುಗಳು, ಪರಿಸರ, ಹೆಣ್ಣುಮಗು ಇತ್ಯಾದಿ). ಸಮಾಲೋಚನೆ ಸಂಕೀರ್ಣ ಸ್ವರೂಪದ್ದಾಗಿದ್ದು ವೇಗವಾಗಿ ನಡೆದುಹೋಗುತ್ತಿದ್ದರಿಂದ ಮತ್ತು ಎಲ್ಲರೂ ಎಲ್ಲ ಅಂಶಗಳ ಬಗ್ಗೆಯೂ ಗಮನಕೊಡುವುದು ಸಾಧ್ಯವಿಲ್ಲದೇ ಇದ್ದರಿಂದ ಈ ಬಗೆಯ ವಿಭಾಗೀಕರಣಗಳನ್ನು ತಂತ್ರಗಳೆಂಬಂತೆ ಮಾಡಿಕೊಳ್ಳಲಾಗಿತ್ತು. NGO ಫೋರಂನಲ್ಲಿ ಸೈದ್ಧಾಂತಿಕ ಸಂಘರ್ಷಗಳಿರಲಿಲ್ಲವೆಂದಲ್ಲ. ಆದರೆ ಪ್ರಸ್ತುತ ಸನ್ನಿವೇಶದಲ್ಲಿ ವಿಶ್ವದಾದ್ಯಂತ ಮಹಿಳೆಯರ ಒಳಿತನ್ನು ಗಮನದಲ್ಲಿರಿಸಿ ಎಲ್ಲರೂ ಒಟ್ಟಿಗೆ ಬರುವ ಪ್ರಯತ್ನ ನಡೆದಿತ್ತಷ್ಟೆ. ಪ್ರಾಸಂಗಿಕವೆಂಬಂತೆ, ಭಾರತದ ಮಹಿಳೆಯರು ಈ ಎಲ್ಲ ಕೂಟಗಳಲ್ಲೂ ಸಕ್ರಿಯವಾಗಿ ಪಾಲ್ಗೊಂಡಿದ್ದರು, ಆಫ್ರಿಕನ್ನರದ್ದನ್ನು ಮಾತ್ರ ಹೊರತುಪಡಿಸಿ – ತಾವು ಏಷಿಯಾ–ಫೆಸಿಫಿಕ್ ಪ್ರದೇಶಕ್ಕೆ ಸೇರುವುದರಿಂದ.

ಸಂಧಾನದ ಪ್ರಕ್ರಿಯೆಯಲ್ಲಿ ಸೋಲಿತ್ತು ಮತ್ತು ಗೆಲವೂ ಇತ್ತು. ಇದು ನಡೆಯುತ್ತಿದ್ದುದಲ್ಲ ದಿನದ ಕೊನೆಯಲ್ಲೇ. ಸೆಪ್ಟೆಂಬರ್ 15ರಂದು ಪ್ರಧಾನ ಸಮಿತಿಯು ತನ್ನ ಕೆಲಸವನ್ನು ಬೆಳಿಗ್ಗೆ 4.44 ಕೊನೆಗೊಳ್ಳಿಸಿದಾಗ ಅದರ ಅಧ್ಯಕ್ಷರು ಹೀಗೆ ಘೋಷಿಸಿದರು– "ನಾನು ನಾಳೆ ಸರ್ವಸದಸ್ಯರ ಸಭೆಯಲ್ಲಿ ಮಂಡಿಸಲು ತುಂಬಾ ಹೆಮ್ಮೆ ಪಡುವ ಕ್ರಿಯಾಯೋಜನೆ ನಮ್ಮ ಬಳಿ ಇದೆ. ನಾಳಿನ ನಂತರ ಅದರ ಅನುಷ್ಠಾನದ ನಿಜವಾದ ಸವಾಲು ಪ್ರಾರಂಭವಾಗುತ್ತದೆ."

ಅನೇಕ ದೇಶಗಳು ಸಹಜವಾಗಿಯೇ ದಾಖಲೆಯ ಅನೇಕ ಭಾಗಗಳ ಮೇಲೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದವು. ಮತ್ತೆ ಕೆಲವು ತಮ್ಮ ಅಭಿಪ್ರಾಯಗಳ ತಪ್ಪು ನಿರೂಪಣೆಯನ್ನು ಆಕ್ಷೇಪಿಸಿಶಿದ್ದಿದವು ಆದರೆ ವಿಶ್ವಸಂಸ್ಥೆಯ ಪ್ರಕ್ರಿಯೆಯಲ್ಲಿ ಇದೆಲ್ಲ ಆಗುತ್ತದೆಂದು ಹೇಳಲು ಸಾಧ್ಯವಿಲ್ಲ. ವಿಶ್ವಸಂಸ್ಥೆಯ ವಿಚಾರದಲ್ಲಿ ಹೇಳಬೇಕೆಂದರೆ, ವಿಶ್ವ ಮಹಿಳಾ ಸಮಾವೇಶದಲ್ಲಿ ಅವಶ್ಯಕವಾದ ಅಂತರರಾಷ್ಟ್ರೀಯ ಸರ್ವಸಮ್ಮತಿ ದೊರಕಿತು. ಅದೆಲ್ಲ ಏನೇ ಇರಲಿ, ವಿಶ್ವ ಸಂಸ್ಥೆಯ ಸಮಾವೇಶಗಳಲ್ಲಿ ಹೊರಬರುವ ಕ್ರಿಯಾ ಯೋಜನೆಯಂತಹ ಒಂದು ದಾಖಲೆ ಯಾವುದೇ ನಿರ್ದಿಷ್ಟ ದೇಶಕ್ಕೂ ಸಂಬಂಧಿಸಿದ್ದಾಗಿರದೆ ಪಾಲಿಸಿ ಮತ್ತು ಕ್ರಿಯೆಗಳಿಗೊಂದು ಮಾರ್ಗದರ್ಶಿಯಾಗಿರುತ್ತದೆ.

ಬೀಜಿಂಗಿನ ಕ್ರಿಯಾಯೋಜನೆಯು,ಅಂತಿಮವಿಶ್ಲೇಷಣೆಯಲ್ಲಿ ಅನೇಕ ಭಾಗಗಳು ದುರ್ಬಲಗೊಂಡಿರುವ ಒಂದು ಸಡಿಲವಾದ ದಾಖಲೆಯೂ ಆದರೂ, ಅದರ ಹಿಂದೆ ಇರುವ ಕ್ಲಿಷ್ಟಕರ ಕೆಲಸಗಳನ್ನೆಲ್ಲಾ ಗಣನೆಗೆ ತಂದುಕೊಂಡು ನೋಡಿದಾಗ ಅದು ಅಷ್ಟೇನೂ ಕೆಟ್ಟದಾಗಿಲ್ಲ ಎಂದೇ ಎನಿಸುತ್ತದೆ. ಕ್ರಿಯಾ ಯೋಜನೆಯ ಅಂತಿಮ ಪ್ರತಿ ದೊರಕುವಂತಾದಾಗ ಮಾತ್ರ ಅದರ ವಿವರವಾದ ವಿಮರ್ಶೆ ಸಾಧ್ಯ. ಆದರೆ ಇದರ ಆಧಾರದ ಮೇಲೆ ಕೆಲಸ ಮಾಡಲಂತೂ ಖಂಡಿತಾ ಸಾಧ್ಯ. UNDPಯ ಆಡಳಿತಾಧಿಕಾರಿ ಜೇಮ್ಸ್ ಗುತ್‌ಸಾವೆ ಸ್ಪೆತ್ ಹೇಳುವಂತೆ, "ಅಂತರರಾಷ್ಟ್ರೀಯ ಸಮಾವೇಶಗಳು ಸುಂದರ ದಾಖಲೆಗಳನ್ನು ತರುತ್ತವೆ. ಪಾತ್ರ ನಿರ್ವಹಿಸುವ ನಟರು ಇರುತ್ತಾರೆಯೇ ಎಂಬುದೇ ಪ್ರಶ್ನೆ. ಸರ್ಕಾರಗಳು ಹಣ

(20ನೇ ಪುಟಕ್ಕೆ ಮುಂದುವರಿದಿದೆ)

ಬೀಜಿಂಗ್ ಸಮ್ಮೇಳನಕ್ಕೊಂದು ಪರ್ಯಾಯ ಘೋಷಣೆ

ಬೀಜಿಂಗ್ ಸಮಾವೇಶಕ್ಕೆ ಸಿದ್ಧತೆಗಳು ಪ್ರಾರಂಭವಾದಾಗಿನಿಂದಲೂ ಅದಕ್ಕೆ ತೀವ್ರ ಟೀಕೆಯನ್ನು ವ್ಯಕ್ತಪಡಿಸುತ್ತಾ ಬಂದಿರುವ ಕೆಲ ಸ್ವಾಯತ್ತ ಮಹಿಳಾ ಗುಂಪುಗಳು (ಅನುದಾನ ಪಡೆಯದ), ಎಡ ರಾಜಕೀಯ ಪಕ್ಷಗಳು, ಜನಪರ ಚಳವಳಿಗಳು ಮಹಿಳಾ ಚಳವಳಿಯನ್ನು ವಿಶ್ವಸಂಸ್ಥೆ ಮತ್ತು ಫಂಡಿಂಗ್ ಏಜನ್ಸಿಗಳು ನಿರ್ದೇಶಿಸುತ್ತಿರುವ ಪ್ರವೃತ್ತಿಯ ಬಗ್ಗೆ ತೀವ್ರ ಪ್ರಶ್ನೆಗಳನ್ನೆತ್ತಿವೆ. ಹಾಗೆಯೇ ಮಹಿಳಾ ಚಳವಳಿಯ ನಿಜ ದನಿ ಕೇಳಿಬರಬೇಕಾದರೆ ಇಂತಹ ಸರ್ಕಾರ ಮತ್ತು ಫಾರಿನ್ ಫಂಡಿಂಗ್‌ಗಳ ಕೈಯಿಂದ ಮುಕ್ತವಾಗುವುದು ಮುಖ್ಯ ಎಂಬಂಶವನ್ನು ದೃಢವಾಗಿ ಪ್ರತಿಪಾದಿಸುತ್ತಾ ಬಂದಿವೆ. ಅಂತಹ ಗುಂಪುಗಳ ಜಾಲ (network)ವೊಂದು ಬೀಜಿಂಗ್ ಸಮಾವೇಶಕ್ಕೆ ಹೊರತಂದ ಪರ್ಯಾಯ ಘೋಷಣೆ (declaration) ಇದು.

ಮಹಿಳೆಯರಾದ, ಕೆಲಸಗಾರರಾದ, ಬೆಳೆಗಾರರಾದ, ಗ್ರಾಹಕರಾದ, ಉತ್ಪಾದಕರಾದ, ತಾಯಂದಿರಾದ, ಈ ದೇಶದ ಪ್ರಜೆಗಳಾದ ನಾವು :

—"ಮಹಿಳೆಯರನ್ನು ಪ್ರಬಲಧಾರೆಯ ಅಭಿವೃದ್ಧಿಯಲ್ಲಿ ಸಮಗ್ರಗೊಳಿಸುವ" ಘೋಷಣೆಯ ಮೂಲಕ ಮಹಿಳೆಯರು ಒಳಗಾಗಿರುವ ಯಾವತ್ತೂ ಅಸಮಾನತೆ ಮತ್ತು ಗುಲಾಮಿಕೆಗಳನ್ನು ಹೋಗಲಾಡಿಸುವ ಜಾಗತಿಕ ಪ್ರಯತ್ನದ ದೃಢನಿಶ್ಚಯವನ್ನೇ ಪ್ರಶ್ನಿಸುತ್ತೇವೆ. ಈ ಹಾದಿಯು ಕೆಲವರಿಗೆ ಅಭಿವೃದ್ಧಿಯದ್ದಾದರೆ ಅನೇಕರಿಗೆ ಅವನತಿಯದ್ದು, ಕೆಲವರಿಗೆ ಶಾಂತಿಯದ್ದಾದರೆ ಅನೇಕರಿಗೆ ಹಿಂಸೆಯದ್ದು. ಇಂತಹ ಅಭಿವೃದ್ಧಿಯಿಂದ ಮಹಿಳೆಯರ ಹಿತಾಸಕ್ತಿಗಳ ಪೂರೈಕೆ ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಪ್ರಬಲ ಅಭಿವೃದ್ಧಿ ಮಾದರಿಯೊಳಕ್ಕೆ ಮಹಿಳಾ ಚಳವಳಿ ಮೌನ ಸಮ್ಮತದಿಂದ ಸೆಳೆದುಕೊಳ್ಳಲ್ಪಡುವುದೂ ಸಾಧ್ಯವಿಲ್ಲ. ಮಾರುಕಟ್ಟೆಯೊಂದೇ ಮಾನವ ಬದುಕಿನ ಏಕೈಕ ಪ್ರಜಾತಂತ್ರಾತ್ಮಕ ನಿರ್ಣಯಾತ್ಮಕ ಶಕ್ತಿ ಎನ್ನುವುದನ್ನು ನಿರಾಕರಿಸುತ್ತೇವೆ.

—ಪ್ರತಿ ದೇಶಗಳು ಮತ್ತು ಜನರು ಪ್ರಬಲ ಸಾಮ್ರಾಜ್ಯಶಾಹೀ ಏಜನ್ಸಿಗಳು ಮತ್ತು ಹಣಕಾಸು ಸಂಸ್ಥೆಗಳ ಒತ್ತಡದಿಂದ ಮುಕ್ತವಾಗಿ ತಮ್ಮದೇ ಅಭಿವೃದ್ಧಿ ಮಾರ್ಗಗಳನ್ನು ಆರಿಸಿಕೊಳ್ಳುವ ಹಕ್ಕು ಹೊಂದಬೇಕೆಂಬುದನ್ನೂ ಪ್ರತಿಪಾದಿಸುತ್ತೇವೆ. ಏಕೆಂದರೆ ರಾಷ್ಟ್ರೀಯ ಸರ್ವಸ್ವತಂತ್ರತೆಯ ಚೌಕಟ್ಟಿನಲ್ಲಿ ಮಾತ್ರ ಮಹಿಳೆಯರು ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಸಾಧ್ಯ.

—ರಾಜನಿಕ ಹೊಂದಾಣಿಕೆಯಲ್ಲ, ರಾಜನಿಕ ಪರಿವರ್ತನೆಯನ್ನು ಒತ್ತಾಯಿಸುತ್ತೇವೆ. ಮೊದಲನೆಯದು ಬಡತನವನ್ನು ಸ್ತ್ರೀ ಸ್ವರೂಪೀಗೊಳಿಸುವುದಲ್ಲದೆ ಮಹಿಳೆ ಮತ್ತು ಪುರುಷರ ನಡುವೆ ಹಸಿವಿನ ಮರುಹಂಚಿಕೆ ಮಾಡುತ್ತದೆ. ಎರಡನೆಯದು ಮಹಿಳೆಯರಿಗೆ ಸಮಾನ ಹಕ್ಕುಗಳೊಂದಿಗೆ ದ್ರವ್ಯ ಮತ್ತು ಆಸ್ತಿಗಳ ಮರುಹಂಚಿಕೆಗೆ ಸಂಬಂಧಿಸಿದ್ದು.

—ಬೀಜಿಂಗ್ ಸಮಾವೇಶಕ್ಕೆ ತಯಾರಿಸಲಾದ ದಾಖಲೆಗಳು ಮಹಿಳೆಯರ ಸ್ಥಿತಿಗತಿ ಕೆಳಗಿಳಿಯುತ್ತಲೇ ಹೋಗುತ್ತಿರುವ ಮೂಲಕಾರಣ ಗುರುತಿಸದೇ ಹೋಗುವುದರಿಂದ ಅವುಗಳಲ್ಲಿ ಏನೂ ಇಲ್ಲ ಎಂಬುದನ್ನು ಕಂಡುಕೊಂಡಿದ್ದೇವೆ. ಅವು ಒಳ್ಳೆಯ ಉದ್ದೇಶಗಳ ಕೆಲ ಹೇಳಿಕೆಗಳಷ್ಟೇ. ಅವು ಪ್ರಸ್ತುತದ ಜಾಗತಿಕ ಶ್ರೇಣೀಕರಣಗಳನ್ನು ಪ್ರಶ್ನಿಸುವುದಿಲ್ಲ.

ಈ ಸನ್ನಿವೇಶದ ಹಿನ್ನಲೆಯಿಂದ ನಾವು ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಬಯಸುತ್ತೇವೆ.

1. ಶ್ರಮ ಮತ್ತು ಪರಿಸರಗಳ ಶೋಷಣೆಯ ಸಂಬಂಧದಲ್ಲಿ ಬಹುರಾಷ್ಟ್ರೀಯ ಕಾರ್ಪೊರೇಷನ್‌ಗಳ

ಚಟುವಟಿಕೆಗಳನ್ನು ಹತೋಟಿಯಲ್ಲಿಡಲು ಸಾಧ್ಯವಾಗುವಂತಹ ಕಾನೂನುಬದ್ಧ ಅಧಿಕಾರವುಳ್ಳ ಒಂದು ಮೇಲ್ವಿಚಾರಣಾ ಸಮಿತಿಯನ್ನು ವಿಶ್ವಸಂಸ್ಥೆ ರೂಪಿಸಬೇಕು. ವಿಶ್ವಸಂಸ್ಥೆಯ ಮೇಲೆ ಅಮೇರಿಕಾದ ಹಿಡಿತ ತಪ್ಪಬೇಕು.

2. ಮಹಿಳೆಯರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಯೋಜಿಸಲಾಗಿರುವ ಕಾರ್ಯಕ್ರಮಗಳು ಭೂಸುಧಾರಣೆ ಮತ್ತು ಮಹಿಳೆಯರ ಹಕ್ಕುಗಳನ್ನೇ ಆಧಾರವಾಗಿ ಹೊಂದಿರಬೇಕು. ಕೃಷಿ ಕೂಲಿ ಹೆಂಗಸರ ಮತ್ತು ಅಸಂಘಟಿತ ವಲಯದ ಹೆಂಗಸರ ಹಕ್ಕುಗಳ ರಕ್ಷಣೆಗೆ ವಿಶೇಷ ಅಂತರರಾಷ್ಟ್ರೀಯ ಒಡಂಬಡಿಕೆಗಳಾಗಬೇಕು. ಅಸಂಘಟಿತ ಎನ್ನುವಾಗ ಮನೆಯಲ್ಲಿದ್ದುಕೊಂಡೇ ನಿರ್ದಿಷ್ಟ ಸಮಯದಲ್ಲಿ ಕೆಲಸ ಮಾಡುವವರೂ ಸೇರಬೇಕು.

3. ಲಿಂಗ ಅಸಮಾನತೆಗೆ ಆರ್ಥಿಕ ಸ್ವಾತಂತ್ರ್ಯ ಅತ್ಯವಶ್ಯಕ ಎಂಬಂಶವನ್ನು ಗಮನಕ್ಕೆ ತಂದುಕೊಂಡು ಭಾರತ ಸರ್ಕಾರವು, ಆಧುನೀಕರಣದ ಪ್ರಕ್ರಿಯೆಯಲ್ಲಿ ಪರ್ಯಾಯ ನೌಕರಿಯನ್ನು ಒದಗಿಸದೆಯೇ, ಅವಶ್ಯಕ ನೈಪುಣ್ಯತೆಗಳನ್ನು ಬೆಳೆಸದೆಯೇ ಮಹಿಳಾ ಕೆಲಸಗಾರರನ್ನು ತಮ್ಮ ಕೆಲಸಗಳಿಂದ ಎತ್ತಂಗಡಿ ಮಾಡುವುದನ್ನು ನಿಲ್ಲಿಸಬೇಕು.

4. ಆಹಾರ ಭದ್ರತೆ ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿರುವಾಗ ಆಹಾರ ಸಬ್ಸಿಡಿಗಳನ್ನು ನಿಲ್ಲಿಸಿಬಿಡುವುದನ್ನು ನಾವು ವಿರೋಧಿಸುತ್ತೇವೆ. ಎಲ್ಲ ಗ್ರಾಹಕರಿಗೆ ಕೈಗೆಟುಕುವ ಬೆಲೆಗಳಲ್ಲಿ ಅವಶ್ಯಕ ಸಾಮಗ್ರಿಗಳು ಸಿಗುವಂತಾಗಲು, ಸಾರ್ವಜನಿಕ ಹಂಚಿಕೆ ವ್ಯವಸ್ಥೆಯನ್ನು ಬಲಪಡಿಸಿ ವಿಸ್ತರಿಸಬೇಕಲ್ಲದೆ ಈಗಿನ ವ್ಯವಸ್ಥೆಯಲ್ಲಿರುವ ತೀವ್ರ ಅರೆಕೊರೆಗಳನ್ನು ಹೋಗಲಾಡಿಸಬೇಕು. ಬೆಳೆಕೊಡುತ್ತಿರುವ ಭೂಮಿಯನ್ನು ಸರ್ಕಾರದ ನೀತಿಗಳಡಿ ವಾಣಿಜ್ಯ ಇಲ್ಲವೇ ಕೈಗಾರಿಕೆಗಳಿಗೆ ಮನಸೋಇಚ್ಛೆ ಲಭ್ಯವಾಗುವಂತೆ ಮಾಡಕೂಡದು.

5. ಪರಿಸರ ಸಂರಕ್ಷಣೆಯ ನೆಪದಲ್ಲಿ ಕಾಡು, ಗೋಮಾಳಗಳೇ ಮುಂತಾದ ಸಾಮಾನ್ಯ ಸಂಪನ್ಮೂಲಗಳನ್ನು ಮಹಿಳೆಯರ ಹಿಡಿತದಿಂದ ತಪ್ಪಿಸುವುದು ನಿಲ್ಲಬೇಕು. ರಕ್ಷಣೆಯ ಹೆಸರಲ್ಲಿ ಅವನ್ನು ವಾಣಿಜ್ಯ ಉದ್ದೇಶಗಳಿಗೆ ಗುತ್ತಿಗೆ ಕೂಡ ಕೊಡಲಾಗುತ್ತದೆ. ಮಹಿಳೆಯ ಬದುಕಿಗೆ ಮುಖ್ಯ ಆಧಾರವಾಗಿರುವ ಇವು ಮಹಿಳೆಯರಿಗೆ ದಕ್ಕುವಂತಾಗಬೇಕು.

6. ಸುರಕ್ಷಿತ ಕುಡಿಯುವ ನೀರು, ಶೌಚ ವ್ಯವಸ್ಥೆ, ಊಟ–ವಸತಿಗಳು ಎಲ್ಲರ ಮೂಲಭೂತ ಅವಶ್ಯಕತೆಗಳಾಗಿದ್ದು ಅದರ ಪೂರೈಕೆಯ ಹೊಣೆ ಸರ್ಕಾರ ಹೊರಬೇಕು.

7. ಚುನಾವಣೆಯಲ್ಲಿ ಸ್ಪರ್ಧಿಸಲು ಮಕ್ಕಳ ಸಂಖ್ಯೆ ಮಾನದಂಡವಾಗಬಾರದು. ರಾಜ್ಯ ಸಭೆಗಳು ಮತ್ತು ಪಾರ್ಲಿಮೆಂಟೂ ಸೇರಿದಂತೆ ಎಲ್ಲ ಸ್ತರಗಳಲ್ಲಿ ಮಹಿಳೆಯರಿಗೆ ಕೊನೇ ಪಕ್ಷ 33% ಮೀಸಲಾಯಿತಿ ಕೊಡುವ ಮೂಲಕ ಮಹಿಳೆಯರು ರಾಜಕೀಯದಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹಿಸಬೇಕು.

8. ಹೆಚ್ಚುತ್ತಿರುವ ಮೂಲಭೂತವಾದೀ ಪ್ರವೃತ್ತಿ ಮತ್ತು ಕೋಮು ಹಿಂಸಾಚಾರಗಳನ್ನು ತಡೆಯಲು ಸರ್ಕಾರ ಧರ್ಮವನ್ನು ರಾಜಕೀಯದಿಂದ ಸಂಪೂರ್ಣ ವಿಮುಕ್ತಗೊಳಿಸಲು ಕ್ರಮ ತೆಗೆದುಕೊಳ್ಳಬೇಕು. ಕೋಮು ಸ್ವರೂಪೀ ಪ್ರಚಾರದಲ್ಲಿ ತೊಡಗುವವರನ್ನು ಚುನಾವಣೆಯಲ್ಲಿ ಸ್ಪರ್ಧಿಸಲು, ಸಾರ್ವಜನಿಕ ಹುದ್ದೆಗಳನ್ನು ಹೊಂದಲು ಅನರ್ಹರಾಗಿಸಬೇಕು.

9. ಪೋಲೀಸು, ಅರೆ - ಮಿಲಿಟರಿ ಶಕ್ತಿಗಳು, ಮಾಲೀಕರು, ರಾಜಕಾರಣಿಗಳು ಮತ್ತು ಕೋಮುಶಕ್ತಿಗಳ ಕೈಯಲ್ಲಿ ಮತ್ತು ದಮನಕಾರೀ ಜಾತಿ-ವರ್ಗ ಆಧಾರಿತ ವ್ಯವಸ್ಥೆಯಲ್ಲಿ ಲೈಂಗಿಕ ಹಿಂಸಾಚಾರಕ್ಕೆ ಒಳಗಾಗುವ ಮಹಿಳೆಯರಿಗೆ ನ್ಯಾಯ ಒದಗಿಸುವ ವಿಶೇಷ ಕಾನೂನುಗಳನ್ನು ಸರ್ಕಾರ ತರಬೇಕು. ಅಂತಹವರಿಗೆ ಇರಲು ಗೌರವಯುತ ಜಾಗ ಒದಗಿಸಬೇಕು.

10. ಕುಟುಂಬದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ತಂದುಕೊಡುವಂತಹ ಕಾನೂನುಗಳನ್ನು ಸರ್ಕಾರ ತರಬೇಕು. ಪಿತ್ರಾರ್ಜಿತ ಮತ್ತು ಗಂಡನ ಆಸ್ತಿಯಲ್ಲಿ ಹಕ್ಕು, ಎಲ್ಲ ಸಾಮಗ್ರಿಗಳ ಮೇಲೆ ಜಂಟಿ ಒಡೆತನ, ಮಕ್ಕಳನ್ನು ದತ್ತು ಪಡೆಯುವ, ಅವರ ರಕ್ಷಣೆಯ ಹಕ್ಕು ಇತ್ಯಾದಿಗಳೆಲ್ಲ ಅಲ್ಲಿ ಸೇರಬೇಕು. ಹೆಂಡತಿಯನ್ನು ಥಳಿಸುವುದು ಅಪರಾಧವೆಂದು ಪರಿಗಣಿತವಾಗಬೇಕು.

11. ಮಾಧ್ಯಮಿಕ ಹಂತದವರೆಗೂ ಖಡ್ಡಾಯ

(3ನೇ ರಕ್ಷಾ ಪುಟಕ್ಕೆ ಮುಂದುವರಿದಿದೆ)

ಒಂದು ಅನುಭವ - ಅನಿಸಿಕೆ

● ಮಾಲತಿ ಸರೋಜ್

ಬೆಂಗಳೂರಿನಲ್ಲಿ ಸ್ಥಾಪಿತಗೊಂಡಿದ್ದ ಕೋ–ಆರ್ಡಿನೇಷನ್ ಯೂನಿಟ್ (CU) ಮೂಲಕ ನನಗೆ ಬೀಜಿಂಗ್ ಸಮಾವೇಶದಲ್ಲಿ, ಅಂದರೆ NGO ಫೋರಂನಲ್ಲಿ ಭಾಗವಹಿಸುವ ಅವಕಾಶ ಸಿಕ್ತು. ಈವರೆಗೂ ವಿಶ್ವಸಮಾವೇಶಗಳಲ್ಲಿ ಮೇಸ್ತರದ ಹೆಂಗಸರೇ ಭಾಗವಹಿಸುತ್ತಿದ್ದರು. ಹೆಚ್ಚು grassroot ಹೆಂಗಸರು ಭಾಗವಹಿಸಬೇಕೆಂದು ಕಳೆದೆರಡು ವರ್ಷದಲ್ಲಿ NGO ಫೋರಂನವರು ನಿರ್ಧರಿಸಿ, ನ್ಯಾಯಯುತ ರೀತಿಯಲ್ಲಿ grass root ಹೆಂಗಸರನ್ನು ಕಳಿಸಲು ಈ CU ಅನ್ನು ಸ್ಥಾಪಿಸಿದರಂತೆ. ಕೋ-ಆರ್ಡಿನೇಷನ್ ಯುನಿಟ್‌ನವರು ಬೆಂಗಳೂರು ಮತ್ತು ಡೆಲ್ಲಿಗಳಲ್ಲಿ ಕೆಲಸ ಮಾಡುತ್ತಿದ್ದರು. ತಾವು ಬೀಜಿಂಗಿಗೆ ಕಳಿಸಲು ಆಯ್ಕೆ ಮಾಡಿದ ಎಲ್ಲರಿಗೂ ಎರಡು ಹಂತದಲ್ಲಿ orientation ಇಟ್ಟುಕೊಂಡಿದ್ದರು. ನಾವು ಸಣ್ಣ ಸಣ್ಣ ಮಟ್ಟದಲ್ಲಿ ಎತ್ತುವ ಪ್ರಶ್ನೆಗಳನ್ನು ಬೀಜಿಂಗಿನ NGO ಫೋರಂನ ವಿಸ್ತಾರ ಸನ್ನಿವೇಶದಲ್ಲಿ ಹೇಗೆ ಚರ್ಚೆಗೆ ತರಬಹುದು ಎಂಬುದರ ಬಗ್ಗೆ ಹೇಳುತ್ತಿದ್ದರು. ನಮ್ಮ ಎಲ್ಲ ಪ್ರಶ್ನೆಗಳು 18 ವಿಶಾಲ ಪ್ರಶ್ನೆಗಳ ಅಡಿಯಲ್ಲಿ ಬರಬೇಕಾಗಿತ್ತು. ಮೊದಲು ದಕ್ಷಿಣ ಭಾರತ ಹಂತದಲ್ಲಿ ನಂತರ ರಾಷ್ಟ್ರೀಯ ಹಂತದಲ್ಲಿ ಇಂತಹ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಜಾಲ ನಿರ್ಮಾಣವಾಗುತ್ತದೆಂದು ಹೇಳಿದ್ದರು. ಆದರೆ ಅದಾಗಲೇ ಇಲ್ಲ: ಹೀಗಾಗಿ ವೇಶ್ಯಾವೃತ್ತಿ ಪ್ರಶ್ನೆಯ ಬಗ್ಗೆ ಕೆಲಸ ಮಾಡುತ್ತಾ ಬಂದಿರುವ ನನಗೆ ಹುಯಿರೋದಲ್ಲ ಯಾವ ವರ್ಕ್‌ಶಾಪಿನಲ್ಲಿ ಇದರ ಚರ್ಚೆ ನಡೆಯುತ್ತಿದೆ ಎಂದೇ ತಿಳಿಯಲಿಲ್ಲ. ವಿಶ್ವ ಮಟ್ಟದಲ್ಲಿ ವೇಶ್ಯಾವೃತ್ತಿ ಕುರಿತು ಕೆಲಸ ಮಾಡುತ್ತಿರುವ ಗುಂಪುಗಳ ಜತೆ ಸಂಪರ್ಕ ಬೆಳೆಸುವ ಆತ್ಯುತ್ಸಾಹದಿಂದ ನಾನು ಹೋಗಿದ್ದೆ. ಅಲ್ಲದೆ ನಮ್ಮ ಪ್ರಶ್ನೆಗಳನ್ನು ವಿಶ್ವಸಂಸ್ಥೆಯ ಸಮಾವೇಶದಲ್ಲಿ ಹೆಚ್ಚು ಹರಿತವಾಗಿ ಮಂಡಿಸುವ 'ಲಾಬಿ ಗ್ರೂಪ್' ಇರುತ್ತದೆಂದು ಹೇಳಿದ್ದರು. ಆದರೆ ಈ ಲಾಬಿ ಗ್ರೂಪ್ ಅನ್ನು ಯಾರು ಆಯ್ಕೆ ಮಾಡಿದರು ? ಈ ಲಾಬಿಗ್ರೂಪಿನ ಹಿತಾಸಕ್ತಿಯಾದರೂ ಏನಿತ್ತು ? ನಾವು ಎತ್ತಿದ ಪ್ರಶ್ನೆಗಳು ಏನಾದವು ಎಂಬುದೆಲ್ಲಾ ಪ್ರಶ್ನೆಗಳಾಗೇ ಉಳಿದವು? ಚೀನಾಕ್ಕೆ ಹೋಗುವ ಮುಂಚೆಯೇ ಅನೇಕ ವಿಶ್ವ ಸಮಾವೇಶಗಳಲ್ಲಿ ಭಾಗವಹಿಸಿ ಅನುಭವ ಇರುವ ಬೆಂಗಳೂರಿನ ಪತ್ರಕರ್ತೆಯೊಬ್ಬರು ನಮಗೆ ಕೆಲವು ಸೂಚನೆಗ್ಗಳನ್ನು ಕೊಟ್ಟಿದ್ದರು. "ವಿಶ್ವಸಂಸ್ಥೆಯಲ್ಲಿ 'Holy Sea' ತುಂಬಾ ಬಲವಾಗಿದೆ. ಇಂಡಿಯಾ ಎಂದರೆ ಬರೀ ಕಾಶ್ಮೀರ ಅದೂ, ಇದೂ ಎಂದೇ ಮುಗಿಸಿಬಿಡುತ್ತಾರೆ. ನಾವು ನಮ್ಮ ಪ್ರಶ್ನೆಗಳನ್ನು ತುಂಬಾ ಬಲವಾಗಿ ಮಂಡಿಸದ ಹೊರತು ಪ್ರಯೋಜನವಿಲ್ಲ" ಎಂದೆಲ್ಲಾ ಹೇಳಿದ್ದರು. ಇಂತಹ ಸೂಚನೆ ಸಿಕ್ಕೂ ನಮ್ಮಲ್ಲಿ ಅಂತಹ ಪ್ರಯತ್ನ ಯಾಕೆ ನಡೆಯಲಿಲ್ಲ ? ಅಥವಾ ಇದು ಬರೀ ಲಾಬಿ ಗ್ರೂಪಿನಲ್ಲಿ ಆಯಿತೆ ? ಏನೊಂದೂ ತಿಳಿಯಲಿಲ್ಲ. ಏಕೆಂದರೆ ನಮಗೆ ಲಾಬಿ ಗ್ರೂಪಿನ ಜತೆ ಏನೂ ಸಂಪರ್ಕವೇ ಇರಲಿಲ್ಲ. ವಿಶ್ವ ಸಂಸ್ಥೆಯ ಸಮಾವೇಶದೊಳಕ್ಕೆ ಪ್ರವೇಶ ಪಡೆದಿದ್ದ ಇವರು ಪ್ರತಿದಿನ ಅಲ್ಲಿ ಲಾಬಿ ಮಾಡುತ್ತಿದ್ದರು. ದಿನದ ಕೊನೆಯಲ್ಲಿ ಬೇರೆ ದೇಶದ ಲಾಬಿ ಗ್ರೂಪುಗಳು ಬಂದು ತಮ್ಮ ದೇಶದವರೊಂದಿಗೆ ಅಲ್ಲಿ ಏನು ನಡೆಯಿತು ? ತಾವೆಷ್ಟು ಬ್ರಾಕೆಟ್ಟುಗಳನ್ನು ತೆಗೆಸುವುದರಲ್ಲಿ ಸಫಲರಾದೆವು ಎಂದೆಲ್ಲಾ ಹಂಚಿಕೊಳ್ಳುತ್ತಿದ್ದರು. ಆದರೆ ನಮ್ಮ ದೇಶದ ಲಾಬಿ ಗುಂಪು ಒಂದು ದಿನವೂ ಹೀಗೆ ಹಂಚಿಕೊಳ್ಳಲಿಲ್ಲ. ಹಾಗಾಗಿ ನಮಗೆ ಏನೂ ಗೊತ್ತಾಗುತ್ತಿರಲಿಲ್ಲ. ಈ ಲಾಬಿ ಗುಂಪಿನಲ್ಲಿ ಬಹುತೇಕರು ಸ್ವಯಂ ಸೇವಾ ಸಂಸ್ಥೆಗಳವರೇ ಆಗಿದ್ದರಿಂದ ಇಲ್ಲಿ ಒಟ್ಟಾರೆಯಲ್ಲಿ ಭಾರತದ ಸ್ವಾಯತ್ತ ಮಹಿಳಾ ಚಳವಳಿಯ ಆಸಕ್ತಿ ಬಿಂಬಿತಗೊಂಡಿತೇ ಎಂಬುದೇ ಪ್ರಶ್ನೆ. ಬಹಳ ವರ್ಷಗಳಿಂದ ಸ್ವಾಯತ್ತ ಮಹಿಳಾ ಚಳವಳಿಯ ಮಂಚೂಣಿಯಲ್ಲಿರುವ ಸ್ನೇಹಿತೆಯೊಬ್ಬರನ್ನು 'ನೀವೇಕೆ ಲಾಬಿ ಗುಂಪಿನಲ್ಲಿ ಇಲ್ಲ' ಎಂದು ಕೇಳಿದಾಗ ಆಕೆ ತನಗೆ ಅದರಲ್ಲಿ ನಂಬಿಕೆ ಇಲ್ಲವೆಂದರು. ಹೀಗಾಗಿ ಈ ಲಾಬಿ ಗುಂಪಿನ ಬಗ್ಗೆ ನನಗೆ ಈಗಲೂ ಪ್ರಶ್ನೆಗಳೇ ಇವೆ.

ನನ್ನ ಅನುಭವದ ಪ್ರಕಾರ NGO ಫೋರಂನಲ್ಲೇ ಸ್ವಯಂ ಸೇವಾ ಸಂಸ್ಥೆಗಳು ಮತ್ತು ರಾಜಕೀಯ ಗುಂಪುಗಳ ನಡುವೆ ಅವರು ಎತ್ತುತ್ತಿದ್ದ ಪ್ರಶ್ನೆಗಳಲ್ಲಿ ತುಂಬಾ ವ್ಯತ್ಯಾಸವಿರುತ್ತಿತ್ತು. ಅಲ್ಲದೆ ಒಂದೇ ಪ್ರಶ್ನೆಯನ್ನೇ ನೋಡುತ್ತಿದ್ದ ರೀತಿಯಲ್ಲೂ ಭಿನ್ನತೆ ಇತ್ತು. ಉದಾಹರಣೆಗಾಗಿ, ರಾಚನಿಕ ಹೊಂದಾಣಿಕೆಯ ಪ್ರಶ್ನೆ ಇಡೀ NGO ಫೋರಂನಲ್ಲಿ ಎಲ್ಲೆಲ್ಲೂ ಧ್ವನಿಸುತ್ತಿದ್ದರೂ ಅರ್ಥೈಸುವಿಕೆಯಲ್ಲಿ ವ್ಯತ್ಯಾಸವಿರುತ್ತಿತ್ತು. ರಾಜಕೀಯ ಗುಂಪುಗಳು ಮೂಲಭೂತ ರಾಚನಿಕ ಬದಲಾವಣೆಗಳ ಬಗ್ಗೆ ಮಾತನಾಡಿದರೆ, ವಿಶ್ವಬ್ಯಾಂಕು, ಫೋರ್ಡ್ ಫೌಂಡೇಷನ್‌ಗಳಂತಹ ದತ್ತಿ ಸಂಸ್ಥೆಗಳಿಂದಲೂ ಹಣ ಸಹಾಯ ಪಡೆಯುವ ಸ್ವಯಂ ಸೇವಾ ಸಂಸ್ಥೆಗಳು ಇಡೀ ಸಮಸ್ಯೆಯಲ್ಲಿ ಅಡಗಿರುವ ಒಟ್ಟಾರೆಯಾದ ಮೊದಲ ವಿಶ್ವದ ರಾಜಕೀಯದ ಬಗ್ಗೆ ಯೋಚಿಸುತ್ತಿರಲಿಲ್ಲ. ಇಲ್ಲಿ ದೇಸೀಯ ಮಹಿಳೆಯರ ಜಾಲದ ಸಹ ಸ್ಥಾಪಕಿ **ವಿನೋನಾ ಲಾಡುಕ್** ಹೇಳಿದ ಮಾತು ಮುಖ್ಯವಾಗುತ್ತದೆ. ಫೋರಂನ ಚಟುವಟಿಕೆಗಳಿಗೆ ಭಾಗಶಃ ಹಣ ಒದಗಿಸಿರುವ ವಿಶ್ವಬ್ಯಾಂಕಿನ ಸಮಂಜಸತೆಯನ್ನು ಆಕೆ ಪ್ರಶ್ನಿಸಿದರು, ಹಾಗೆಯೇ ಇಂದು ಪ್ರಪಂಚದ ಬಹುತೇಕ ತೀರ್ಮಾನಗಳನ್ನು ಕೈಗೊಳ್ಳುವ ಶಕ್ತಿ ಹೊಂದಿದ್ದು ಜನತೆಯ ಹಕ್ಕುಗಳನ್ನು ಬಾಧಿಸುತ್ತಿರುವ transnationalಗಳನ್ನು ಕೂಡ. ಇವುಗಳಿಂದ ನಿರ್ದೇಶಿಸಲ್ಪಡುತ್ತಿರುವ ಇಂದಿನ ಅಭಿವೃದ್ಧಿ ಮಾದರಿಯಿಂದಾಗಿ ಪ್ರತಿ 9 ಸೆಕೆಂಡುಗಳಲ್ಲಿ ಬ್ರೆಸಿಲ್ಲಿನ ಒಂದು ಎಕರೆ ಮಳೆಕಾಡು ನಾಶವಾಗುತ್ತಿದೆ, ಕೆನಡಾದಲ್ಲಿ ಪ್ರತಿ 11 ಸೆಕೆಂಡುಗಳಿಗೆ ಒಂದು ಎಕರೆ ಕಾಡು ನಾಶವಾಗುತ್ತಾ ದೇಸೀ ಜನರ ಬದುಕನ್ನು ಛಿದ್ರಗೊಳಿಸುತ್ತಿರುವ ಸನ್ನಿವೇಶವನ್ನು ಮುಂದಿಟ್ಟರು. ಇಂತಹ ಸ್ಥಿತಿಯನ್ನು ನೋಡುವಾಗ NGO ಫೋರಂನಲ್ಲಿದ್ದ ಸ್ವಯಂ ಸೇವಾ ಸಂಸ್ಥೆಗಳು ತಮ್ಮ ದೇಶಗಳಿಗೆ ವಾಪಸ್ಸಾಗಿ ವಿಶ್ವಬ್ಯಾಂಕು, ಫೋರ್ಡ್ ಫೌಂಡೇಷನ್‌ಗಳನ್ನು ತಿರಸ್ಕರಿಸುವುದು ಸಾಧ್ಯವೇ ? ದೈನಂದಿನ ಬದುಕಿನ ಸಮಸ್ಯೆಗಳ ನಿವಾರಣೆಗೆ ರಾಚನಿಕ ಬದಲಾವಣೆಗಾಗಿ ಕೆಲಸ ಮಾಡಲು ಸಾಧ್ಯವೇ ? ಎಂದೆಲ್ಲಾ ಅನಿಸಿತ್ತು. ಇಡೀ NGO ಫೋರಂನಲ್ಲಿ ಇಂತಹ ಸ್ವಯಂ ಸೇವಾ ಸಂಸ್ಥೆಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದವು. 36,000 ಹೆಂಗಸರು ಬಂದಿದ್ದರು, grass rootನವರ ಭಾಗವಹಿಕೆ ಇತ್ತು ಎಂಬುದೇ ದೊಡ್ಡ ವಿಚಾರವಾದರೆ ಅವರ ಧ್ವನಿ ಎಷ್ಟರ ಮಟ್ಟಿಗೆ ಕೇಳಿ ಬಂತು ? ಎಂಬ ಪ್ರಶ್ನೆಯನ್ನೂ ಕೇಳಿಕೊಳ್ಳಬೇಕಾಗುತ್ತದೆ. ಏಕೆಂದರೆ ಇಲ್ಲಿ ಕೆಲವೇ ಹೆಂಗಸರು ಎಷ್ಟು powerful ಆಗಿರುತ್ತಿದ್ದರೆಂದರೆ, ಸಾಧಾರಣದವರಿಗೆ ಏನು-ಎತ್ತ ಎಂಬುದೇ ಗೊತ್ತಾಗುವಂತಿರಲಿಲ್ಲ. ದಿನನಿತ್ಯ ಧ್ಯಾನದಿಂದ ಕೂಲಿಯವರೆಗೆ 200 ವರ್ಕ್‌ಶಾಪುಗಳಿರುತ್ತಿದ್ದವು. ಆದರೆ ಅವುಗಳನ್ನು ನಿರ್ದಿಷ್ಟ ಸಮಸ್ಯೆಗಳಲ್ಲಿ ಕೇಂದ್ರೀಕರಿಸಿದ ಪ್ರಯತ್ನ ಕಂಡುಬರುತ್ತಿರಲಿಲ್ಲ. ಸಮಾನ ಸಮಸ್ಯೆ ಎದುರಿಸುತ್ತಿರುವವರ ಜಾಲ ನಿರ್ಮಾಣ ಆಗಲೇ ಇಲ್ಲ. ನನ್ನ ಕ್ಷೇತ್ರವಾದ ವೇಶ್ಯಾವೃತ್ತಿಯ ಸಮಸ್ಯೆಯನ್ನು ಕುರಿತಂತೆ ನಾನೇ ವಯಕ್ತಿಕ ಹಂತದಲ್ಲಿ ಕೆಲಗುಂಪುಗಳೊಡನೆ ಸಂಪರ್ಕ ಬೆಳೆಸುವ ಪ್ರಯತ್ನ ಮಾಡಿದೆನೇ ಹೊರತು ವ್ಯವಸ್ಥಿತ ಜಾಲ ನಿರ್ಮಾಣದ ಪ್ರಶ್ನೆಯೇ ಬಳಲಿಲ್ಲ. ಇಲ್ಲಿ ನನಗನ್ನಿಸಿದ್ದೆಂದರೆ ಸ್ವಯಂ ಸೇವಾ ಸಂಸ್ಥೆಗಳು ತಮ್ಮದೇ ಆಸಕ್ತಿಗಳಲ್ಲಿ ಸಣ್ಣ-ಸಣ್ಣ ನೆಲೆಯಲ್ಲೇ ಕೆಲಸ ಮಾಡೋದ್ರಿಂದ ಜಾಲ ನಿರ್ಮಾಣದ ಕಲ್ಪನೆಯೇ ಉದ್ಭವಿಸಲಿಲ್ಲ. ಸಮಸ್ಯೆಗಳ ತತ್‌ಕ್ಷಣದ ಪರಿಹಾರದಲ್ಲಿ ಯೋಚಿಸುವ ಇವು ವಿಸ್ತಾರ ರಾಜಕೀಯ ಪ್ರಶ್ನೆಗಳನ್ನು ನೋಡುವುದೇ ಇಲ್ಲ.

NGO ಫೋರಂನಲ್ಲಿ ದಕ್ಷಿಣ ದೇಶಗಳ ಮಹಿಳೆಯರು ಉತ್ತರ ದೇಶದ ಮಹಿಳೆಯರ ಬೆಂಬಲ ಕೇಳುತ್ತಿದ್ದರು. ಆದರೆ ಆ ದೇಶಗಳ ಹೆಂಗಸರು ಅಲ್ಲಿನ ಸರಕಾರಗಳ ಪಾಲಿಸಿ ಮೇಲೆ ಎಂತಹ ಪರಿಣಾಮ ತರಬಲ್ಲರೋ ತಿಳಿಯದು. ಇವೆಲ್ಲದರ ಜತೆಗೆ ತೀವ್ರ ಅಸಮಾಧಾನ ತಂದ ಮತ್ತೊಂದು ವಿಷಯವೆಂದರೆ ಇಡೀ ಫೋರಂನ ಚರ್ಚೆಗಳಿಗೆ ಇಂಗ್ಲೀಷೇ ಪ್ರಧಾನ ಭಾಷೆ ಆಗಿದ್ದುದು. ನಮ್ಮಲ್ಲಂತೂ ಸರಿಯಾದ ಭಾಷಾ ಪರಿವರ್ತನಕಾರರೇ (inter preters) ಇರಲಿಲ್ಲ. ಎಲ್ಲವನ್ನೂ ಇಂಗ್ಲೀಷಿಗೆ ಭಾಷಾಂತರಿಸುತ್ತಿದ್ದರೇ ಹೊರತು ಇಂಗ್ಲೀಷನ್ನು ಬೇರೆ ಭಾಷೆಗೆ ಮಾಡುತ್ತಿರಲಿಲ್ಲ. ಈ ವಸಾಹತುಶಾಹಿ ಮನೋಭಾವ ಪ್ರಶ್ನೆಗೊಳಗಾಯಿತು ಕೂಡ.

ಬೀಜಿಂಗ್‌ನಲ್ಲಿ ಸಾಧಿಸಿದ್ದೇನು ?

ಬಾ. ಹ. ರಮಾಕುಮಾರಿ

4ನೇ ಅಂತರ ರಾಷ್ಟ್ರೀಯ ಮಹಿಳಾ ಸಮ್ಮೇಳನ ಬೀಜಿಂಗ್‌ನಲ್ಲಿ ನಡೆಯಿತು. ಇತರ ರಾಷ್ಟ್ರಗಳಂತೆ ಭಾರತ ದಿಂದಲೂ ಒಂದು ನಿಯೋಗ ಹೋಗಿತ್ತು. ಭಾರತವೂ ತನ್ನ ದೇಶದ ಮಹಿಳಾ ಸ್ಥಿತಿಗತಿಗಳ ಚಿತ್ರಣ ನೀಡುವುದ ರೊಂದಿಗೆ ತಾನು ಮಹಿಳಾ ಅಭಿವೃದ್ಧಿಗಾಗಿ ಹಾಕಿಕೊಂಡ ಕಾರ್ಯಕ್ರಮಗಳ ಪಟ್ಟಿಯನ್ನು ಬಿತ್ತರಿಸಿತು. ಅಲ್ಲಿಗೆ ಹೋಗಿ ಬಂದನಂತರ ಬೆಂಗಳೂರಿನ co-ordination unit ಇತ್ತೀಚೆಗೆ ಒಂದು ಕಾರ್ಯಕ್ರಮ ಏರ್ಪಡಿಸಿತ್ತು. ಬೀಜಿಂಗ್‌ಗೆ ಹೋಗಿ ಬಂದವರ ಅನುಭವಗಳ ಹಂಚಿಕೆ ಮತ್ತು ಸಾರ್ವಜನಿಕರೊಂದಿಗೆ ಸಂವಾದ ಅದರ ಉದ್ದೇಶ ವಾಗಿತ್ತು.

ಅಲ್ಲಿ ಮಾತಾಡಿದವರೆಲ್ಲಾ ತಮ್ಮ ಅನುಭವಕ್ಕೆ ಸಿಕ್ಕ, ತಾವು ವರ್ತಿಸಿದ ರೀತಿಯಲ್ಲಿ ಸ್ವಲ್ಪ ಭಾಗ ಹಂಚಿಕೊಂಡರು. ಸುಮಾರು ಏಳೆಂಟು ಜನ ಮಾತನಾಡಿದಾಗ್ಯೂ ಒಟ್ಟಾರೆ ಅಲ್ಲಿ ಏನು ನಡೆಯಿತು? ಯಾವ್ಯಾವ ವಿಚಾರ ಹೇಗೆ ಚರ್ಚಿತವಾಯಿತು? ಭಾರತದ ವರದಿಯಲ್ಲಿ ಏನಿತ್ತು? ವಾಸ್ತವದಲ್ಲಿ ಏನು ಇದೆ? ಎಂಬಿತ್ಯಾದಿ ವಿಚಾರಪೂರ್ವಕ ಚರ್ಚೆ ಆಗಲೇ ಇಲ್ಲ. ಪೀಸ್‌ಮೀಲ್ ಆಗಿ ಅರೆಬರೆ ಯಾಯಿತೇ ವಿನಹ ಸ್ಪಷ್ಟ ಚಿತ್ರಣ ಸಿಗುವುದು ಸಾಧ್ಯ ವಾಗಲಿಲ್ಲ.

ಬಹುತೇಕ ಸ್ವಯಂ ಸೇವಾ ಸಂಘಟನೆಯವರೇ ಇದ್ದ ಸಮಾರಂಭದಲ್ಲಿ ಎಲ್ಲರೂ 'Grass root' ಎಂಬುದನ್ನು ಪದೇ ಪದೇ ಬಳಸಿದರು. ಅಂದರೆ ಭಾರತ ಪ್ರತಿನಿಧಿಸಿದ್ದ ತಂಡದಲ್ಲಿ grass root levelನಿಂದ ಬಂದ ಮಹಿಳೆ ಯರು ಇದ್ದುದು ಭಾರತದ ವಿಶೇಷತೆ ಎಂಬುದನ್ನು ಹೆಗ್ಗಳಿಕೆಯಿಂದ ಹೇಳಿಕೊಂಡಾಯಿತೇ ವಿನಹ ಅಂತಹ grass rootನಿಂದ ಎಷ್ಟು ಜನ ಬಂದಿದ್ದರು, ಅವರು ಹೇಗೆ ಅಲ್ಲಿ ಭಾಗವಹಿಸಿದರು, ಅವರ ಪ್ರತಿಕ್ರಿಯೆ ಏನಾಗಿತ್ತು, ಇದರಿಂದ ಅವರಿಗೆ ಯಾವ ಪ್ರೇರಣೆ ಸಿಕ್ಕಿತು ಎಂಬುದಕ್ಕೆ ನಮಗಂತೂ ಉತ್ತರ ಸಿಗಲಿಲ್ಲ. Elite ವರ್ಗದ ಜನರ ಬಾಯಲ್ಲಿ grass root ಎನ್ನುವ ಶಬ್ದವೇ ಎಲ್ಲೋ ಒಂದು ಕಡೆ ಅಡಗಿಕೊಂಡಂತಾಗಿಬಿಟ್ಟು ಬಡತನ ರೇಖೆ ಎಂಬುದನ್ನು ಹೇಗೆ ಕಾಣಲಾಗುತ್ತಿಲ್ಲವೋ ಹಾಗೇ grass root ಎನ್ನುವುದನ್ನು ಕಾಣಲಾಗುತ್ತಿಲ್ಲ. ಈ ಚರ್ಚೆಯ ವಿಚಾರ ಯಾರಿಗೆ ಬೇಕಾಗಿದೆ? ಎಂಬ ನನ್ನೊಳಗಿನ ಪ್ರಶ್ನೆಗೆ ನೂರಾರು ಪ್ರಶ್ನೆಗಳು ಹುಟ್ಟಿದವೇ ವಿನಹ ಉತ್ತರದ ವಾಸನೆಕೂಡ ಸಿಗಲಿಲ್ಲ. ಅಲ್ಲಿ ಬಂದಿದ್ದ ವರು ಬಹುತೇಕ sophisticated ಜನ. ಜನಪರ ಕಾಳಜಿ ಇದ್ದರೂ ಕೈಕೆಸರಾಗದಿದ್ದವರು. ಜನರ ನಡುವೆ ಕೆಲಸ ಮಾಡಬೇಕಾದ ನಮ್ಮಂತಹವರಿಗೆ ಇಂತಹ ಕಾರ್ಯ ಕ್ರಮಗಳು ಕುತೂಹಲಕರವಾಗಿ ಸ್ಫೂರ್ತಿಯುತವಾಗಿ ಅಂತಃಶಕ್ತಿಯನ್ನು ತುಂಬಬೇಕಾಗಿದ್ದವು. ಅದರೆ ನಿರುತ್ಸಾಹಗೊಂಡು ಮಧ್ಯದಲ್ಲಿಯೇ ವಾಪಸು ಬರುವಂತಾಗಿದ್ದು ನಿರಾಶೆ ತರಿಸುವಂತಹ ಸಂಗತಿ.

ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಒಂದು ಈ ಕಾರ್ಯಕ್ರಮ ಸಂಪೂರ್ಣ ಇಂಗ್ಲಿಷ್ ಮಯವಾಗಿದ್ದು ಒಂದೆಡೆಯಾದರೆ ಕನ್ನಡ ಮತ್ತು ಇತರೆ ಭಾಷೆಯಲ್ಲಿ ಅನುಭವ ಹಂಚಿಕೊಂಡವರ ಮಾತುಗಳನ್ನೂ ಇಂಗ್ಲಿಷ್‌ಗೆ ತರ್ಜುಮೆ ಮಾಡಿದ್ದು ಯಾವ grass root level ನವರಿಗೆ ಎಂಬುದು ನನಗೆ ಅರ್ಥವಾಗಲಿಲ್ಲ.

ಭಾರತದ ವರದಿ ಏನಿತ್ತು, ಅದರಲ್ಲಿ ಮಹಿಳೆಯರ ಸ್ಥಿತಿಯ ಬಗ್ಗೆ ಏನು ಹೇಳಿದ್ದಾರೆ, ಇತರ ದೇಶದ ಮಹಿಳೆಯರ ಬಗ್ಗೆ ಏನಿದೆ, ಅವೆಲ್ಲವನ್ನು ಹೇಗೆ ಅಲ್ಲಿ ಚರ್ಚಿಸಿದರು, ಪರಿಹಾರ ಸೂತ್ರವಾಗಿ ಏನನ್ನು ಕಂಡು ಕೊಂಡರು, (ಕಂಡುಕೊಳ್ಳಲು ಸಾಧ್ಯ) ಎಂಬ ಬಗ್ಗೆ ವಾಸ್ತವಾಂಶ ತಿಳಿಯುವ ಕುತೂಹಲ ಮತ್ತು ಕಾಳಜಿ ನನಗಿತ್ತು. ಅಲ್ಲಿ ಮಾತನಾಡಿದ ಯಾರೊಬ್ಬರ ಅನುಭವವೂ ಇವುಗಳ ಮೇಲೆ ಬೆಳಕು ಚೆಲ್ಲಲಿಲ್ಲ.

ಲಕ್ಷಾಂತರ ಮಹಿಳೆಯರು ಬೀಜಿಂಗ್ ಎಂಬ ಹೆಸರೂ ಕೂಡ ಗೊತ್ತಿಲ್ಲದ ಜನ. ನಿರಾತಂಕವಾಗಿ, ಚರ್ಚಿಸ ಲಾಗುತ್ತಿರುವ ವಿಚಾರವನ್ನು ವಾಸ್ತವದ ಘೋರತೆಯಲ್ಲಿ ನರಳುತ್ತ ಅನುಭವಿಸುತ್ತಲೇ ಇರುತ್ತಾರೆ. ಯಾವ ಘೋರಗಳೂ ಇಲ್ಲದೇ ಎಲ್ಲ ಸವಲತ್ತುಗಳನ್ನೂ ಪಡೆದು ಕೊಂಡ ನಾವು ಅವರ ಬಗ್ಗೆ ಅವರ ಗೈರುಹಾಜರಿಯಲ್ಲಿ ಚರ್ಚಿಸುತ್ತೇವೆ. ಇದು ನಮ್ಮ ದೇಶದ ವೈರುಧ್ಯ.

ಇಂದಿಗೂ ಗ್ರಾಮಿಣ ಪ್ರದೇಶಗಳಿಗೆ ಬರಲಿ. ಎರಡು ಹೊತ್ತಿನ ಊಟಕ್ಕಾಗಿ ಎಷ್ಟೊಂದು ಬಗೆಯಲ್ಲಿ ಹೋರಾಟ ಮಾಡುವ ಜನ ಇಂದು ಇದ್ದಾರೆ. ಅದರಲ್ಲಿ ಮಹಿಳೆಯರ ಪಾಲು ಎಷ್ಟು ಎನ್ನುವುದು ಗೊತ್ತಾಗುತ್ತದೆ.

ಮಹತ್ವದ ಶಿಫಾರಸ್ಸುಗಳಾದ ಹೆಣ್ಣುಮಕ್ಕಳ ಶಿಕ್ಷಣ, ಕೌಟುಂಬಿಕ ಹಿಂಸೆ, ದೌರ್ಜನ್ಯ ಅಥವಾ ಅತ್ಯಾಚಾರ, ಆರ್ಥಿಕ ಅಭಿವೃದ್ಧಿ, ಲಿಂಗಸಮಾನತೆ ಮುಂತಾದ ವಿಷಯಗಳನ್ನು ಚರ್ಚಿಸುವ ಮುನ್ನ ಅತ್ಯಂತ ತಳಸ್ತರದಲ್ಲಿ ವಾಸಿಸುವ ಯಾವ ಜನಾಂಗದ ಮಹಿಳೆಯರನ್ನು ಅಧ್ಯಯನ ಮಾಡಲಾಗಿದೆ ?

ಇಂದಿಗೂ ಮೂಢನಂಬಿಕೆಗಳಿಗೆ ಬಲಿಯಾಗಿ ಹೆಣ್ಣುಮಕ್ಕಳ ಭವಿಷ್ಯವನ್ನು ಬರ್ಬರಗೊಳಿಸುವ ಆಚರಣೆಗಳಿವೆ. ಲಿಂಗಭೇದದ ಒಂದೇ ಒಂದು ಕಾರಣದಿಂದ ಸಮಾಜದಲ್ಲಿನ ಇಡೀ ಮಹಿಳಾ ಸಮೂಹವೇ ಯಾವ್ಯಾವ ರೀತಿ (ನಗರ ಮತ್ತು ಗ್ರಾಮೀಣ ಎರಡಲ್ಲೂ) ಬಲಿಪಶುಗಳಾಗುತ್ತಿದ್ದಾರೆ ಎನ್ನುವುದು ಅಷ್ಟು ಸುಲಭವಾಗಿ ಅರ್ಥವಾಗದು.

ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ನಗರಪ್ರದೇಶದ ನಮಗೆ ಅರ್ಥವೇ ಆಗದಂತಹ ಸಮಸ್ಯೆಗಳನ್ನು ಕೇವಲ ಹೆಣ್ಣುಮಕ್ಕಳು ಅನುಭವಿಸುತ್ತಿದ್ದಾರೆ.

1) ಶೌಚಾಲಯದ ಸಮಸ್ಯೆ. ಪರಿಸರ ನಾಶದಿಂದಾಗಿ ಬಯಲು ಶೌಚಾಲಯದ ಕಾರಣದಿಂದ ಊರ ಹೊರಗೆ ಶೌಚಾಲಯಕ್ಕೆ ಹೋದ ಹೆಣ್ಣುಮಕ್ಕಳ ಸ್ಥಿತಿ. ಇದನ್ನು ಅಧ್ಯಯನ ಮಾಡಿದರೆ ಅಶ್ಚರ್ಯಪಡುವಂತಹ ಸಂಗತಿಗಳು ದಿಗಿಲುಗೊಳಿಸುತ್ತವೆ.

2) ಚಿಕ್ಕವಯಸ್ಸಿನ ಹೆಣ್ಣುಮಕ್ಕಳು ಕೃಷಿ ಕಾರ್ಮಿಕರ ಮಕ್ಕಳಾಗಿದ್ದು ದನಕಾಯಲು, ಸೌದೆ ಇತ್ಯಾದಿ ಆಯ್ದು ತರುವಲ್ಲಿ ಎದುರಿಸುವ ಸಮಸ್ಯೆಗಳು ಹಾಗೂ ಲೈಂಗಿಕ ಶೋಷಣೆಗಳು.

3) ಮೂಢನಂಬಿಕೆಗಳಿಗೆ ದಾಸರಾಗಿ ದೇವರು, ಮೈಲಿಗೆ ಮುಂತಾದ ದೈವೀಭಯದ ಕಾರಣದಿಂದಾಗಿ ಆಚರಿಸಲ್ಪಡುವ ಪದ್ಧತಿಗಳು (ನಾನು ಕಂಡಂತೆ ತುಮಕೂರು, ಚಿತ್ರದುರ್ಗ ಜಿಲ್ಲೆ ಇತರ ಕಡೆಯೂ ಇರಬಹುದು) ಯಾದವ (ಗೊಲ್ಲ ಜನಾಂಗ) ಜನಾಂಗದಲ್ಲಿ ಇಂದಿಗೂ ಆಚರಿಸಲ್ಪಡುವ ಈ ಪದ್ಧತಿ ಅತ್ಯಂತ ಅಮಾನವೀಯ ಹಾಗು ಅನಾರೋಗ್ಯಕರವಾದುದಾಗಿದೆ.

ಮುಟ್ಟಾದ ಹೆಣ್ಣುಮಕ್ಕಳಿಂದ ಇದು ಪ್ರಾರಂಭವಾಗಿ ತಾಯಿಯಾಗುವ ತನಕ ಇದು ನಿರಂತರ ಪೋಷಿಸಲ್ಪಡುತ್ತಿದೆ. ಊರ ಹೊರಗೆ ಒಂದು ಪುಟ್ಟ ಗುಡಿಸಲು ಹಾಕಿ ಬಾಣಂತಿಯನ್ನು ಇರಿಸಿದರೆ ಪ್ರತಿ ತಿಂಗಳೂ ಮುಟ್ಟಾದವರಿಗೆ ಮರದ ನೆರಳು, ಕೆಲವೊಮ್ಮೆ ಗುಡಿಸಲು, ಈಗ ಶಾಲಾ ಕಟ್ಟಡ ಇತ್ಯಾದಿಗಳೇ ಆಸರೆ. ಇವರ ನೆರಳು ಗ್ರಾಮದ ಮೇಲೆ ಬೀಳದಿರುವಷ್ಟು ದೂರದಲ್ಲಿ ವಾಸ್ತವ್ಯ ಹೂಡಬೇಕು. ಮೊದಲ ಬಾರಿಗೆ ಮುಟ್ಟಾಗ 10-20 ದಿನಗಳವರೆಗೆ, ಪ್ರತಿ ತಿಂಗಳು 3-5 ದಿನಗಳವರೆಗೆ ಹೆರಿಗೆಯಾದರೆ 30-60 ದಿನಗಳವರೆಗೆ ಊರ ಹೊರಗಿರಬೇಕು. ಹೀಗೆ ಇದ್ದ ಸಂದರ್ಭದಲ್ಲಿ ಹಲವಾರು ರೀತಿಯಲ್ಲಿ ಭೀತಿ, ಅನಾರೋಗ್ಯಕ್ಕೆ ದಾರಿ, ಇತ್ಯಾದಿ ಅನಾಹುತಗಳು ಉಂಟಾಗುತ್ತವೆ.

ಎಷ್ಟೋ ಬಾರಿ ಬಾಣಂತಿ ಹಾಗು ಮಗುವಿಗೆ ಸೋಂಕು ಇತ್ಯಾದಿಗಳಾಗಿ ತೊಂದರೆಯಾದರೂ ಆಸ್ಪತ್ರೆಗೆ ಯಾರೂ ಕರೆದೊಯ್ಯುವುದಿಲ್ಲ. ಬೇರೆ ಜನಾಂಗದವರು ಗಾಡಿಯಲ್ಲೋ, ಯಾವುದಾದರೂ ವಾಹನದಲ್ಲೋ ಕರೆದೊಯ್ಯಬಹುದು. ಪರಿಶಿಷ್ಟ ಜನಾಂಗದ ನರ್ಸ್ ಆಗಲೀ, ವೈದ್ಯರಾಗಲೀ ಗೊಲ್ಲರಹಟ್ಟಿಗಳಿಗೆ ಬರುವಂತಿಲ್ಲ. ಕೆಲವೊಮ್ಮೆ ಈ ಜನಾಂಗದ ಹೆಂಗಸು ತನ್ನ ಹೆರಿಗೆಯನ್ನು ತಾನೇ ಮಾಡಿಕೊಳ್ಳಬಹುದಾದ ಪರಿಸ್ಥಿತಿ. ಇವರಲ್ಲಿ ಹೆಣ್ಣುಮಕ್ಕಳನ್ನು ಸಾಮಾನ್ಯವಾಗಿ ಶಾಲೆಗೆ ಕಳುಹಿಸುವುದಿಲ್ಲ. ಕಳುಹಿಸಿದರೂ ಆ ಊರಿನ ಶಾಲೆಯಲ್ಲಿ ಯಾವ ತರಗತಿವರೆಗೆ ಇರುತ್ತದೆಯೋ ಅಲ್ಲೀವರೆಗೆ ಮಾತ್ರ. ಇವರ ಜೀವನ ಶೈಲಿ ಕೂಡ ಯಾವುದೇ ರೀತಿಯಲ್ಲಿ ನಾಗರೀಕವಾಗಿರಲು ಸಾಧ್ಯವಾಗಿಲ್ಲ. ಅವರ ದೇವರನ್ನು (ಜುಂಜಪ್ಪಾ) ಕಂಡರೆ ತುಂಬಾ ಭೀತಿ. ದೇವರ್ಪೂಜಾರಿ (ಯಜಮಾನ ಅಥವಾ ಮುಖಂಡ)ಯೇ ಪ್ರತ್ಯಕ್ಷ ದೈವ.

ಒಟ್ಟಾರೆ ಇವರನ್ನು ಸುದೀರ್ಘ ಅಧ್ಯಯನ ಮಾಡಬಹುದಾದ ಮಹಿಳಾ ಸಂವೇದನೆ, ಲಿಂಗಸಮಾನತೆಗಳ ಬಗ್ಗೆ ಮಾತನಾಡುವ ನಮ್ಮಗಳಿಗೆ ಇಂತಹ ವಾಸ್ತವಗಳು ಸವಾಲಾಗಿವೆ. ಇಂತಹ ನೂರಾರು, ಸಾವಿರಾರು ವಿಚಾರಗಳು ಮೇಲ್‌ಸ್ತರದ ಮಹಿಳಾ ವಾದಿಗಳಿಗಾಗಲೀ ಬೀಜಿಂಗ್‌ನಲ್ಲಿ ನಡೆಯುವ ಸಮ್ಮೇಳನಗಳಿಗಾಗಲೀ ಚರ್ಚಾ ವಸ್ತುವಾಗುವುದೇ ಇಲ್ಲ.

ಅಷ್ಟೇಕೆ ಬೀಜಿಂಗ್‌ನ ನೆರಳಿನಲ್ಲಿಯೇ (ಚೈನಾದಲ್ಲಿ) ನಡೆಯುವ ಒಂದಕ್ಕಿಂತ ಹೆಚ್ಚು ಮಗುವಿಗೆ ಗರ್ಭಧರಿಸಿದರೆ ಸಾಕು ಅವಳ ಮೇಲೆ ನಡೆಯುವ ಭೀಕರ ದೌರ್ಜನ್ಯದ ಕಾನೂನು ಪ್ರಹಾರವಾಗಲೀ ಅಲ್ಲಿ ಚರ್ಚಿತವಾಯಿತೇ ಅಥವಾ ಅಲ್ಲಿನ ಯಾವ ಮಹಿಳೆಯಾದರೂ ಈ ಕುರಿತು ಬಾಯಿ ಬಿಟ್ಟರೇ ?

ವ್ಯವಸ್ಥೆಯ ದುರಂತವೇ ಅಂತಹುದು. ಅನುಭವಿಸು ವವರು ಬಾಯಿ ಬಿಡುವುದಿಲ್ಲ. ಬಾಯಿ ಬಿಟ್ಟವರು ಅನುಭವಿಸಿರುವುದಿಲ್ಲ.

ನಿಜವಾಗಿ ಆಗಬೇಕಾಗಿರುವುದು 'ಮಹಿಳೆ'ಯನ್ನು ಅರ್ಥೈಸಿಕೊಳ್ಳಬೇಕಾಗಿರುವುದು. ಯಾರು ಯಾರನ್ನೋ ಅಲ್ಲ. ಗ್ರಾಮೀಣ ಮಹಿಳೆ ಗ್ರಾಮೀಣ ಮಹಿಳೆಯನ್ನು, ನಗರದ ಮಹಿಳೆ ನಗರದ ಮಹಿಳೆಯನ್ನು. ಯಾರ್‍ಯಾರನ್ನೋ ಯಾರ್‍ಯಾರೋ ಅರ್ಥಮಾಡ ಹೋದರೆ ಒಬ್ಬ ರಾಜಕುಮಾರಿ ಬರೆದ ಭಿಕ್ಷುಕಿಯ ಕತೆಯಂತಾ ಗುತ್ತೆ.

●

ಬೀಜಿಂಗ್ ಸಮಾವೇಶ : ಮಹಿಳೆಯರಿಗೆ ಕೊಟ್ಟದ್ದೇನು ?

12ನೇ ಪುಟದಿಂದ

ಹೂಡುವ ಮನಸ್ಸು ಮಾಡುತ್ತವೆಯೋ ಎಂಬುದನ್ನು ಇದು ಆಧರಿಸುತ್ತದೆ."

ಈ ಬಗೆಯ ವಿಶ್ವ ಸಮಾವೇಶಗಳ ಉದ್ದೇಶ ಮತ್ತು ಸಾರ್ಥಕತೆಯ ಬಗ್ಗೆ ನ್ಯಾಯವಾಗಿಯೇ ಪ್ರಶ್ನೆ ಎತ್ತಬಹು ದಾಗಿದ್ದರೂ, ಮಹಿಳೆಯರ ಸಮಾನತೆಯ ಪ್ರಶ್ನೆಯನ್ನು ವಿವಿಧ ಸ್ತರಗಳಲ್ಲಿ ಎತ್ತುತ್ತಾ ಪ್ರಪಂಚದ ಶಾಂತಿನೆಲೆಗಾಗಿ ಹೋರಾಡಬೇಕಾಗುತ್ತದೆನ್ನುವುದಂತೂ ಸತ್ಯ. ವಿಶ್ವ ಸಂಸ್ಥೆಯ ಪ್ರಕ್ರಿಯೆ ಅಂತಹವುಗಳಲ್ಲೊಂದು. ಆದರೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಯತ್ನಗಳಿಗೆ ಮಹಿಳೆಯರ ಮುನ್ನಡೆಗೆ, ಪಾಲಿಸಿಗಳು ಮತ್ತು ಕಾರ್ಯ ಕ್ರಮಗಳ ಮೂಲಕ ಮಾರ್ಗದರ್ಶಕಗಳನ್ನು ನೀಡುವಲ್ಲಿ ಸಹಾಯಕ.

ಕಳೆದ ಎರಡು ದಶಕಗಳಲ್ಲಿ ವಿಶ್ವಸಂಸ್ಥೆಯ ಅಂತರ ರಾಷ್ಟ್ರೀಯ ಮಹಿಳಾ ವರ್ಷ 1975ರಿಂದೀಚೆಗೆ ಅನೇಕ ಪ್ರಗತಿದಾಯಕ ಪಾಲಿಸಿಗಳು, ಕಾರ್ಯಕ್ರಮಗಳು ರೂಪಿತಗೊಂಡಿದ್ದರೆ ಅದೇನೂ ಆಕಸ್ಮಿಕವಾಗಿ ಆದುದಲ್ಲ.

ಪ್ರಪಂಚದ ವಿವಿದೆಡೆ ಮಹಿಳಾ ಚಳವಳಿ ಎತ್ತಿದ ಪ್ರಶ್ನೆ ಗಳನ್ನು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟ ಗಳಲ್ಲಿ ಸರ್ಕಾರೀ ಕ್ರಿಯೆಗಳಲ್ಲಿ ಒಳಗೊಳ್ಳಿಸಲಾಗಿದೆ. ಈ ಪ್ರಕ್ರಿಯೆಯನ್ನು ಮುನ್ನಡೆಸಿಕೊಂಡು ಹೋಗುವುದೇ ಈಗಿರುವ ಪ್ರಶ್ನೆ. ಎಲ್ಲಕ್ಕಿಂತ ಹೆಚ್ಚಾಗಿ ಪ್ರಪಂಚ ದಾದ್ಯಂತ ಎಲ್ಲ ದೇಶಗಳೊಳಗಡೆ ಮಹಿಳೆಯರ ಸ್ಥಾನ ಮಾನವನ್ನು ಎತ್ತಿಹಿಡಿಯುವ ಪಾಲಿಸಿಗಳ, ಯೋಜನೆಗಳ ಅನುಷ್ಠಾನವನ್ನು ದೃಢಪಡಿಸಿಕೊಳ್ಳುವುದು ಅತಿಮುಖ್ಯ.

ವಿಶ್ವ ಸಮಾವೇಶ ಮತ್ತು NGO ಫೋರಂಗಳಿಗೆ ಏನಾದರೂ ಸಾರ್ಥಕತೆಯಿದೆಯೇ ಎಂಬ ಯಾವತ್ತೂ ಪ್ರಶ್ನೆಗೆ ಗ್ಲೋರಿಯ ಸ್ಟೇನೆಮ್ ಸುಂದರವಾಗಿ ಉತ್ತರಿ ಸುತ್ತಾರೆ, ಫೋರಂಗೆ ಆಕೆ ಕಳಿಸಿದ್ದ ಸಂದೇಶದಲ್ಲಿ: "ಪತಂಗವೊಂದರ ರೆಕ್ಕೆಯ ಬಡಿತ ಹಲವು ಮೈಲಿಗಳ ವರೆಗೂ ಹವಾಮಾನವನ್ನು ಬದಲಿಸಬಲ್ಲುದು ಎಂದು ಭೌತಶಾಸ್ತ್ರಜ್ಞರು ಕೂಡ ನಂಬುತ್ತಾರೆ. ಈ ಮೀಟಿಂಗೊಂದು ಅತಿ ದೊಡ್ಡ ಪತಂಗ."

- ಪ್ರಪಂಚದ ಒಟ್ಟು ಕೆಲಸದ ಶೇ. 60ರಷ್ಟನ್ನು ಮಹಿಳೆಯರು ಮಾಡುತ್ತಾರೆ. ಆದರೆ ಪ್ರಪಂಚದ ಒಟ್ಟು ನೆಲದ ಶೇ. 1 ರಷ್ಟಕ್ಕೆ ಮಾತ್ರ ಅವರ ಅಧಿಕಾರವಿದೆ ಮತ್ತು ಪ್ರಪಂಚದ ಒಟ್ಟು ಆದಾಯದ ಶೇ. 10ರಷ್ಟು ಮಾತ್ರ ಅವರಿಗೆ ದಕ್ಕುತ್ತದೆ.
- ಪ್ರತಿ ವರ್ಷ ಸರಿಸುಮಾರು 1 ಮಿಲಿಯ ಮಕ್ಕಳು ವೇಶ್ಯೆಯರಾಗುತ್ತಾರೆ. ಏಷಿಯಾವು ಅತ್ಯಂತ ಹೆಚ್ಚು ಬಾಲವೇಶ್ಯೆಯರನ್ನು ಹೊಂದಿದೆ.
- ಪ್ರಪಂಚದಾದ್ಯಂತ ಸುಮಾರು ನೂರು ದೇಶಗಳ ಪಾರ್ಲಿಮೆಂಟಿನಲ್ಲಿ ಚುನಾಯಿತ ಮಹಿಳಾ ಸದಸ್ಯರೇ ಇಲ್ಲ.

ಪ್ರತಿಭಟಿಸಿದ ಬಿಷಪ್ ಕಾಟನ್ ವಿದ್ಯಾರ್ಥಿನಿಯರು

ಬಿಷಪ್‌ಕಾಟನ್ ಕ್ರಿಶ್ಚಿಯನ್ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯಾದ ಸೋಫಿಯಾ ಇದೇ ಸೆಪ್ಟೆಂಬರ್26ರ ಸಂಜೆ ರಕ್ತನಾಳ ಸೀಳಿಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದಳು. ಒಬ್ಬ ಪುರುಷ ಉಪಾಧ್ಯಾಯರ ದುರ್ನಡತೆ ಆಕೆಯನ್ನು ಆತ್ಮಹತ್ಯೆಗೆ ಪ್ರೇರೇಪಿಸಿತ್ತು.

ಸೆಪ್ಟೆಂಬರ್ 26ರಂದು, ಕಾಟನ್ ಕಾಲೇಜಿನ ಭೌತಶಾಸ್ತ್ರ ಅಧ್ಯಾಪಕರಾದ ಸಾಮ್ ಮಾರ್ಟಿನ್ ಕ್ರಿಸ್ಟೋಫರ್ ಎಂಬಾತ ಮೊದಲನೇ ಪಿಯುಸಿ ವಿಜ್ಞಾನ ವಿಭಾಗದ ಈಕೆ ನಡೆಯುತ್ತಿದ್ದ ಹಿಂದೀ ತರಗತಿಯಲ್ಲಿದ್ದಾಗ ಏನೋ ಬರವಣಿಗೆ ಕೊಡಬೇಕಾದ ನೆಪ ಹೂಡಿ ಹೊರಗೆ ಕರೆದೊಯ್ದರು. ಆತ ಆಕೆಯನ್ನು ಭೌತಶಾಸ್ತ್ರದ ಪ್ರಯೋಗಾಲಯಕ್ಕೆ ಕರೆದೊಯ್ದು ಅತ್ಯಾಚಾರಕ್ಕೆ ಗುಟ್ಟಾಗಿ ಪ್ರಯತ್ನಿಸಿದರು. ಆಕೆ ಹೇಗೋ ಸೆಣಸಾಡಿ ಆತನ ಕ್ರೂರ ಕೈಗಳಿಂದ ಪಾರಾಗಿ ಹೊರಗೋಡಿ ಬಂದಳು.

ಅದೇ ಕಾಲೇಜಿನಲ್ಲಿ ಓದುತ್ತಿರುವ ಸೋಫಿಯಾಳ ಅಕ್ಕನಿಗೆ ಈ ವಿಷಯ ತಿಳಿಯಿತು. ಇತರ ಕೆಲ ವಿದ್ಯಾರ್ಥಿನಿಯರ ಜತೆ ಆಕೆ ಅಧ್ಯಾಪಕ ಸಾಮ್‌ರನ್ನು ಈ ಪ್ರಕರಣಕ್ಕೆ ವಿವರಣೆ ಕೊಡುವಂತೆ ಕೇಳಿಕೊಂಡಾಗ ಆತ ಆಕೆಯನ್ನು ಎಲ್ಲರ ಎದುರಿಗೆ ಅವಾಚ್ಯ ಮಾತುಗಳಿಂದ ಬಯ್ದು ತರಗತಿಯಿಂದ ಹೊರಹೋಗುವಂತೆ ಗುಡುಗಿದರು. ತಾನು ತುಂಬಾ ಪ್ರಭಾವಶಾಲೀಯೆಂದೂ, ತನ್ನ ವಿರುದ್ಧ ಯಾರೂ ಏನೂ ಮಾಡಲಾಗುವುದಿಲ್ಲವೆಂದು ಹೇಳಿಕೊಳ್ಳುತ್ತಾ ಅವರ ಬಾಯಿ ಮುಚ್ಚಿಸಲು ಪ್ರಯತ್ನಿಸಿದರು. ಸೋಫಿಯಾಳ ಸೋದರಿ ಮತ್ತು ಕೆಲ ಸ್ನೇಹಿತೆಯರು ಪ್ರಿನ್ಸಿಪಾಲರಿಗೆ ದೂರು ಸಲ್ಲಿಸಿದರು. ಆತನ ವಿರುದ್ಧ ಸೂಕ್ತ ಶಿಸ್ತಿನ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದರು. ಈತನ್ಮಧ್ಯೆ ಸಾಮ್ ಸೋಫಿಯಾಳನ್ನು ಕಂಡು ಕ್ಷಮಿಸುವಂತೆ ಕೇಳಿಕೊಂಡರು. ತನ್ನ ಮಾನ ಉಳಿಸಿಕೊಳ್ಳಲು, ನೌಕರಿ ಕಾಪಾಡಿಕೊಳ್ಳಲು ಆತ ತಾನು ತನ್ನ ತಪ್ಪಿಗೆ ಪಶ್ಚಾತ್ತಾಪ ಪಡುವಂತೆ ನಟಿಸಿದರು.

ಮೊದಲನೇ ಪಿಯುಸಿಯ ಹುಡುಗಿಯರು ತರಗತಿಗಳನ್ನು ಬಹಿಷ್ಕರಿಸಲು ನಿರ್ಧರಿಸಿದರು. ಸುದ್ದಿ ಇಡೀ ಕಾಲೇಜಿಗೇ ಹರಡಿತು. ಸಾಮ್‌ನ ವಿರುದ್ಧದ ದೂರನ್ನು ಪರಿಶೀಲಿಸುವ ಬದಲು ಕಾಲೇಜಿನ ಪ್ರಿನ್ಸಿಪಾಲರು ತರಗತಿಗಳನ್ನೇ ಒಂದು ವಾರ ನಿಲ್ಲಿಸಿಬಿಡುವಂತೆ ಆದೇಶಿಸಿದರು. ಒಬ್ಬ ಮಹಿಳೆಯೇ ಆದ ಪ್ರಿನ್ಸಿಪಾಲರ ಈ ಬಗೆಯ ಧೋರಣೆಯಿಂದ ರೊಚ್ಚಿಗೆದ್ದ ವಿದ್ಯಾರ್ಥಿ ಯೂನಿಯನ್ ಧರಣಿ ಕುಳಿತು ಅಧ್ಯಾಪಕರನ್ನು ತತ್‌ಕ್ಷಣ ಅನಾಮತ್ತು ಗೊಳಿಸುವಂತೆ ಒತ್ತಾಯಿಸಿತು. ಅನಾಮತ್ತು ಗೊಳಿಸುವ ಅಧಿಕಾರ ಕಾರ್ಯಕಾರೀ ಮಂಡಳಿಗೆ ಮಾತ್ರ ಇರುವುದರಿಂದ ವಿದ್ಯಾರ್ಥಿಗಳು ಆತನನ್ನು ಈ ಕೂಡಲೇ ತೆಗೆದುಹಾಕುವಂತೆ ಮಂಡಳಿಗೂ ಮೊರೆಹೋದರು.

ಪ್ರಿನ್ಸಿಪಾಲರು ಸಾಮ್ ತಾನು ಈ ತಪ್ಪನ್ನು ಮಾಡಿಲ್ಲವೆಂದು ಬೈಬಲ್ ಮೇಲೆ ಪ್ರಮಾಣ ಮಾಡಿರುವುದಾಗಿಯೂ ಹೀಗಾಗಿ ಸೋಫಿಯಾಳ ಮಾತನ್ನು ನಂಬಲಾಗದೆಂದು ಸಾರ್ವಜನಿಕವಾಗಿ ಹೇಳಿಕೊಂಡಾಗ ಸುರಿಯುವ ಬೆಂಕಿಗೆ ತುಪ್ಪ ಸುರಿದಂತಾಯಿತು. ಆಕೆ ಮುಂದುವರೆದು ನಡೆದ ಪ್ರಕರಣಕ್ಕೆ ಸಾಕ್ಷಾಧಾರಗಳನ್ನು ತೋರುವಂತೆ ಒತ್ತಾಯಿಸಿದರು. ಅಲ್ಲದೆ ಇಂತಹ ಸಂಘರ್ಷಗಳೆಲ್ಲಾ ಕಾಲೇಜಿಗೆ ಕೆಟ್ಟ ಹೆಸರನ್ನು ಮಾತ್ರ ತರುತ್ತವೆಂದು ಸೇರಿಸಿದರು. ಸೋಫಿಯಾ ಇನ್ನೂ ಅವಯಸ್ಕಳಾದ್ದರಿಂದ ಆಕೆಯ ತಂದೆ ತಾಯಿಗಳು ದೂರು ಸಲ್ಲಿಸಲಿ ಎಂದು ಒತ್ತಾಯಿಸಿದರು.

ಕಾರ್ಯಕಾರೀ ಮಂಡಳಿಯ ಜತೆ ಸಮಾಲೋಚಿಸದೆಯೇ ತಾನೇನೂ ಮಾಡಲು ಸಾಧ್ಯವಿಲ್ಲವೆಂದು ಹೇಳುತ್ತಾ ಆಕೆ ಸಾಮ್‌ನ ವಿರುದ್ಧ ಕ್ರಮತೆಗೆದುಕೊಳ್ಳುವುದನ್ನು ಸುಮ್ಮನೆ ಮುಂದೂಡುತ್ತಾ ಹೋದರು. ಪ್ರತಿಭಟಿಸುವ ವಿದ್ಯಾರ್ಥಿನಿಯರನ್ನು ಅನಾಮತ್ತುಗೊಳಿಸುವುದಾಗಿಯೂ ಮತ್ತು ಯೂನಿವರ್ಸಿಟಿಯ ಪರೀಕ್ಷೆಯಲ್ಲಿ ಪಾಲುಗೊಳ್ಳಲು ಅನರ್ಹಗೊಳಿಸುವುದಾಗಿಯೂ ಬೆದರಿಕೆ ಒಡ್ಡಿದ ಆಕೆ ತೊಂದರೆಗಳನ್ನು

ತಾನೇ ಆಹ್ವಾನಿಸಿಕೊಂಡರು. ಅದೂ ಅಲ್ಲದೆ ಸೋಫಿಯಾಳ ತಂದೆತಾಯಿಗಳು ತನ್ನನ್ನು ಭೆಟ್ಟಿಯಾದಾಗ ಅವರನ್ನೂ ಸರಿಯಾಗಿ ಬೆದರಿಸಿದರು.

ಯಾವಾಗ ಮಾಧ್ಯಮಗಳು ಇಡೀ ಸನ್ನಿವೇಶದಲ್ಲಿ ಪ್ರವೇಶ ಮಾಡಿದವೋ ಆಗ ಮಂಡಳಿಯು ಸಾಮ್‌ನನ್ನು ಅನಾಮತ್ತು ಗೊಳಿಸಿತು. ನಡೆದ ಪ್ರಕರಣ ಮತ್ತು ಅಧ್ಯಾಪಕರ ಅನಾಮತ್ತುಗಳ ಬಗ್ಗೆ ಪತ್ರಿಕೆಗಳು ಸಾಕಷ್ಟು ವಿವರವಾಗಿಯೇ ಬರೆದವು. ಅನಂತರವಷ್ಟೇ ವಿದ್ಯಾರ್ಥಿಗಳಿಗೆ ತಿಳಿಯಿತು, ಈ ಅನಾಮತ್ತು ಕೇವಲ ಒಂದು ದಿನದಷ್ಟೇ ಆಗಿತ್ತೆಂತು. ಈ ಪ್ರಕರಣಕ್ಕೆ ಯಾವುದೇ ನೆಲೆಯಿಲ್ಲವೆಂದೂ ಮತ್ತು ಸಾಮ್ ತುಂಬಾ ಕಟ್ಟುನಿಟ್ಟಿನ ಅಧ್ಯಾಪಕರಾದ್ದರಿಂದ ವಿದ್ಯಾರ್ಥಿನಿಯರು ಬೇಕೆಂದೇ ಹೀಗೆ ಮಾಡಿದ್ದಾರೆಂದು ಪ್ರಿನ್ಸಿಪಾಲರು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟರು.

ಈ ಎಲ್ಲದರಿಂದ ರೋಸಿಹೋದ ಕಾಟನ್ಸ್ ಕಾಲೇಜಿನ ಸುಮಾರು 600 ವಿದ್ಯಾರ್ಥಿನಿಯರು ಒಂದಾಗಿ ಪ್ರಕರಣದ ವಸ್ತುನಿಷ್ಠ ತನಿಖೆ ನಡೆಸಬೇಕೆಂದೂ ಮತ್ತು ತಪ್ಪಿತಸ್ಥನನ್ನು ವಿನಾಕಾರಣ ಕಾಪಾಡಲು ಪ್ರಯತ್ನಿಸುತ್ತಿರುವ ಪ್ರಿನ್ಸಿಪಾಲರನ್ನೂ ವಜಾ ಮಾಡಬೇಕೆಂದೂ ಕಾರ್ಯಕಾರೀ ಮಂಡಳಿಯನ್ನು ಒತ್ತಾಯಿಸಿದರು. ವಿದ್ಯಾರ್ಥಿನಿಯರ ಬೇಡಿಕೆಯನ್ನು ಮನ್ನಿಸಿದ ಮಂಡಳಿ ವಸ್ತುನಿಷ್ಠ ತನಿಖೆಗಾಗಿ ಒಂದು ಸಮಿತಿಯನ್ನೂ ರೂಪಿಸಿತು. ಈ ಸಮಿತಿ ಬಸವನಹುಳುವಿನ ವೇಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಇದುವರೆವಿಗೆ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಿಲ್ಲ. ಈತನ್ಮಧ್ಯೆ ಕಾಲೇಜಿನ ಮಧ್ಯಂತರ ರಜೆಗಳು ಪ್ರಾರಂಭವಾಗಿ ಬಿಟ್ಟವು. ಪ್ರಿನ್ಸಿಪಾಲರನ್ನೂ ಒಳಗೊಂಡಂತೆ ಸಾಮ್‌ನನ್ನು ಬೆಂಬಲಿಸಿದ ಉಪಾಧ್ಯಾಯರುಗಳು ಮತ್ತು ಆಡಳಿತದ ವರ್ಗದಲ್ಲಿ ಬಹುಪಾಲು ಮಹಿಳೆಯರೇ ಆಗಿರುವುದು ಆಶ್ಚರ್ಯ ಮತ್ತು ಖೇದದ ಸಂಗತಿ! ಇವೆಲ್ಲದರ ನಡುವೆ ಶ್ಲಾಘನೀಯವಾದ ಒಂದೇ ಅಂಶವೆಂದರೆ, ಎಲ್ಲ ದಮನಕಾರೀ ಅಡೆತಡೆಗಳ ನಡುವೆಯೂ ಹೋರಾಟವನ್ನು ಮುಂದುವರೆಸಿಕೊಂಡು ಹೋಗುತ್ತಿರುವ ವಿದ್ಯಾರ್ಥಿನಿಯರ ಧೀರತನ.

ಮಧ್ಯಂತರ ರಜೆ ಮುಗಿದು ಕಾಲೇಜು ಪ್ರಾರಂಭವಾದ ನಂತರವೂ ನ್ಯಾಯ ಸಿಗುವವರೆಗೂ ತಮ್ಮ ಹೋರಾಟವನ್ನು ಮುಂದುವರಿಸುವ ದೃಢ ಸಂಕಲ್ಪ ಹೊಂದಿದ್ದಾರೆ ವಿದ್ಯಾರ್ಥಿನಿಯರು. ಆದೇನೇಯಾದರೂ, ಈ ಹೋರಾಟದ ಮುಂದಿನ ಹಂತಗಳು ಕೇವಲ ನಿಶ್ಚೈಸಿಕೊಂಡ ಬಿಷಪ್ ಕಾಟನ್ ವಿದ್ಯಾರ್ಥಿನಿಯರ ಮೇಲೆ ಮಾತ್ರ ಅವಲಂಭಿಸಿರದೆ, ನಗರದ ಇತರೇ ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮತ್ತು ಮಹಿಳಾ ಗುಂಪುಗಳು ತಮ್ಮ ಬೆಂಬಲದೊಂದಿಗೆ ಮುಂದೆ ಬರಬೇಕಾಗಿದೆ. **ಅವಯಸ್ಕ ಹುಡುಗಿಯ ಘನತೆಯ** ಪ್ರಶ್ನೆಯು ಹೋರಾಟದಲ್ಲಿ ಭಾಗಿಗಳಾಗಬೇಕಾಗಿದೆ.

ಈವರೆಗಿನ ಹೋರಾಟದ ಪ್ರಕ್ರಿಯೆಯಲ್ಲಿ ಎದ್ದಿರುವ ಕೆಲವು ಪ್ರಶ್ನೆಗಳು :

1. ಮಹಿಳಾ ಕಾಲೇಜುಗಳಲ್ಲಿ ಪುರುಷ ಅಧ್ಯಾಪಕರನ್ನು, ಸಿಬ್ಬಂದಿಗಳನ್ನು ನೇಮಿಸಬೇಕೇ ?

2. ಮಹಿಳಾ ಕಾಲೇಜುಗಳು ಸಹಶಿಕ್ಷಣ (co-education) ಕಾಲೇಜುಗಳಿಗಿಂತ ಯಾವ ಬಗೆಯಲ್ಲಿ ಉತ್ತಮ ?

3. 'ಗುರುಬ್ರಹ್ಮ....' ಎಂದೇ ನಂಬಿಕೊಂಡು ಬಂದಿರುವ ನಮ್ಮ ನಂಬಿಕೆಗಳಿಗೆ ಇಂದಿನ ಸ್ಥಿತಿಯಲ್ಲಿ ಏನಾದರೂ ಅರ್ಥವಿದೆಯೇ ?

4. ಮಹಿಳೆಯರ ವಿಮುಕ್ತಿಯ ಉದ್ದೇಶಗಳನ್ನು ಹೇಳಿಕೊಳ್ಳುವ ಮಹಿಳಾ ಕಾಲೇಜುಗಳು ನಿಜಾರ್ಥದಲ್ಲಿ ಏನಾಗಿವೆ ?

ರಂಜಿನಿ
ಬೇರೆ ಕಾಲೇಜಿನ ವಿದ್ಯಾರ್ಥಿನಿ

[ಅನ್ಯಾಯಕ್ಕೊಳಗಾದ ವಿದ್ಯಾರ್ಥಿನಿಯ ಹೆಸರನ್ನು ಆಕೆಯ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ಬದಲಾಯಿಸಲಾಗಿದೆ]

ಬೀಜಿಂಗ್ ಹೋಗಿ ಬಂದವರು ಹೇಳಿದ್ದು :

- ನಾವು ಬೀಜಿಂಗ್‌ನಲ್ಲಿ ದಲಿತ ಮಹಿಳೆಯರ ಬಗ್ಗೆ, ಎರಡು ಕಾರ್ಯಾಗಾರಗಳನ್ನು ಮಾಡಿದೆವು. ಅಸಂಘಟಿತ ಕಾರ್ಮಿಕರು, ಭೂಮಿ, ವಸತಿ, ಸಂತಾನ ಸಂಬಂಧೀ ಹಕ್ಕುಗಳು, ಸಾರಾಯಿ ಬಗ್ಗೆಯೆಲ್ಲ ಚರ್ಚೆ ಮಾಡಿದೆವು. ಇದೇ ತರದ ಸಮಸ್ಯೆಗಳು ಬೇರೆ ದೇಶಗಳಲ್ಲಿ ಇರುವುದೂ ತಿಳಿಯಿತು. ಮುಸ್ಲಿಂ ಮಹಿಳೆಯರ ಕಾರ್ಯಾಗಾರ ಇತ್ತು. ನಾನು ನಮ್ಮ ಮುಸ್ಲಿಂ ಮಹಿಳೆಯರ ಬಗ್ಗೆ ಹೇಳಿಕೊಂಡೆ. ಅಲ್ಲಿ ನಡೆದ ಜನತಾ ನ್ಯಾಯಾಲಯ ಗಳಲ್ಲಂತೂ ನಾನೂ ಎಂದೂ ಕೇಳೇ ಇರದಂತ ಘಟನೆಗಳನ್ನೂ ಕೇಳಿದೆ. ಎಲ್ಲಿ ಕಂಡರೂ ಮಹಿಳೆಯರ ಸಮಸ್ಯೆ ಒಂದೇ. ಗ್ರಾಸ್‌ರೂಟ್ ಮಹಿಳೆಯರಿಗೆ ಪ್ರಪಂಚದ ಮಹಿಳೆಯರನ್ನು ನೋಡುವ ಅವಕಾಶ ಸಿಕ್ತು. ಎಲ್ಲಿ ನೋಡಿದರೂ ಬರೀ ಮಹಿಳೆಯರೇ. ಚೈನಾ ದೇಶದವರು ಸರಿಯಿಲ್ಲವಂತೆ ಎಂದು ಹೇಳುತ್ತಿದ್ದರು. ಆದರೆ ಅವರು ನಮ್ಮನ್ನು ತುಂಬಾ ಚನ್ನಾಗಿಯೇ ನೋಡಿಕೊಂಡರು.

ಶಹತಾಜ್, ವಿಮೆನ್ಸ್ ವಾಯ್ಸ್ ಬೆಂಗಳೂರು.

- ಅಮೆರಿಕಾ ಮುಂತಾದ ದೇಶಗಳವರೆಲ್ಲ ತುಂಬಾ ಶ್ರೀಮಂತರು, ಆರಾಮಾಗಿದ್ದಾರೆ ಎಂದು ತಿಳಿದುಕೊಂಡಿದ್ದೆ. ಆದರೆ ಅವರ ಕತೆ ಕೇಳುವಾಗ ಕಣ್ಣಲ್ಲಿ ನೀರು ಬಂತು.

ಜಯಮಣಿ, ಕೋಲಾರ

- ಗ್ರಾಸ್‌ರೂಟ್ ಮಹಿಳೆಯರು ದಂಡು ದಂಡಾಗಿ ಭಾಗವಹಿಸಿದ್ದ ಮೊದಲ ಸಮಾವೇಶ ಇದು.
- ಇನ್ನೂ ಹೆಚ್ಚು ಯುವಜನರು ಸಮಾವೇಶದಲ್ಲಿ ಭಾಗವಹಿಸಬೇಕಿತ್ತು.

ಸಿಸ್ಟರ್ ಕೊಲೆಟ್, ಬೆಂಗಳೂರು

- ಅಲ್ಲಿ ಎಲ್ಲರೂ ಬಿಸಿ ಇರುತ್ತಿದ್ದರು. ಆಫ್ರಿಕಾದ ಮಹಿಳೆಯರಲ್ಲಿ ತುಂಬಾ ಒಳ್ಳೆ ನೆಟ್‌ವರ್ಕ್ ಇತ್ತು. ಅವರು ತುಂಬಾ ಮಿಲಿಟೆಂಟ್ ನಮಗೆ ಡೋಲಿಸಿದರೆ.

ಗಂಗಮ್ಮ, ಬೆಂಗಳೂರು.

ಬೀಜಿಂಗ್ ಸಮಾವೇಶಕ್ಕೊಂದು ಪರ್ಯಾಯ ಘೋಷಣೆ

14ನೇ ಪುಟದಿಂದ

ಉಚಿತ ಶಿಕ್ಷಣ ಮಹಿಳೆಯರಿಗೆ ಒದಗಿಸಬೇಕು. ಜತೆಗೆ ಊಟ, ಸಮವಸ್ತ್ರ ಮತ್ತು ಪುಸ್ತಕಗಳನ್ನು ಉಚಿತವಾಗಿ ಒದಗಿಸಲು ಕನಿಷ್ಟ ಪಕ್ಷ ಬಜೆಟ್ಟಿನ 10%ಅನ್ನು ತೆಗೆದಿರಿಸಬೇಕು. ಉನ್ನತ ಶಿಕ್ಷಣ ಖಾಸಗಿಯವರ ಕೈಯಲ್ಲಿ ಸಿಕ್ಕು ಗಗನ ಕುಸುಮವಾಗುವುದು ತಪ್ಪಬೇಕು. ಮಹಿಳಾ ಅಧ್ಯಯನಗಳಂತ ಹೊಸ ಜ್ಞಾನ ಸೃಷ್ಟಿಯ ಸಾಮರ್ಥ್ಯವುಳ್ಳ ಕೇಂದ್ರಗಳು ಪಟ್ಟ ಭದ್ರ ಆಸಕ್ತಿಗಳ ಕೈಯಲ್ಲಿ ಸಿಕ್ಕಿ ನಲುಗುವುದು ತಪ್ಪಬೇಕು.

12. ಮಹಿಳೆಯರ ಆರೋಗ್ಯ ಎನ್ನುವುದು ಜನ ಸಂಖ್ಯೆಯ ಗುರಿಗಳಿಗೆ ವಸ್ತುವಾಗುವುದಾಗಲೀ ಕೇವಲ ಸಂತಾನೋತ್ಪತ್ತಿಗೆ ಸೀಮಿತವಾಗಿರುವುದಾಗಲೀ ತಪ್ಪಬೇಕು. ಎಲ್ಲ ಪ್ರಜೆಗಳಿಗೆ ಮೂಲಭೂತ ಆರೋಗ್ಯ ಸೇವೆಯನ್ನು ಒದಗಿಸುವಲ್ಲಿ ಸರ್ಕಾರ ಬದ್ಧವಾಗಿರಬೇಕು. ಮತ್ತು ಆರೋಗ್ಯವೆನ್ನುವುದು ಖಾಸಗೀ ವೈದ್ಯರ ಮತ್ತು ಬಹುರಾಷ್ಟ್ರೀಯ ಔಷಧಿ ಕಂಪನಿಗಳ ಮರ್ಜಿಯಿಂದ ಬಿಡುಗಡೆ ಪಡೆಯಬೇಕು. ಹಾಗೆಯೇ ಆರೋಗ್ಯ ಸೇವೆಯಲ್ಲಿ ಲಿಂಗ ತಾರತಮ್ಯಗಳು ಕೊನೆಯಾಗಬೇಕು.

13. ರಾಜಕೀಯ ಕ್ಷೇತ್ರದಲ್ಲಿ, ಸಮುದಾಯಗಳಲ್ಲಿ ಮತ್ತು ಉತ್ಪಾದಕತೆಯಲ್ಲಿ ಮಹಿಳೆಯರು ಭಾಗವಹಿಸುವಂತಾಗಲು ಅಗತ್ಯ ಬೆಂಬಲ ಸೇವೆಗಳಾದ ಕ್ರೆಶ್ ವ್ಯವಸ್ಥೆ, ವಯಸ್ಸಾದವರು ಮತ್ತು ರೋಗಿಷ್ಟರಿಗೆ ಶಶ್ರೂಷೆ ಮತ್ತು ನಿರ್ಗತಿಕ ಮಹಿಳೆಯರಿಗೆ ಸೂಕ್ತ ರಕ್ಷಣೆ ಸಿಗುವಂತಾಗಬೇಕು.

REGD NO. KRNA 271

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ

ವಿಳಾಸ :

" ಮಾನಸ "
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು-560 067